# ಪ್ರತಿದಿನವೂ ಭೂಮಿದಿನ

'ಪ್ರೊಟೆಕ್ಟ್' ಕೆಲವು ಸಮಾನ ಮನಸ್ಕ ಗೆಳೆಯರು ಸೇರಿ ಮಾಡಿಕೊಂಡ ಸ್ವಯಂ ಸೇವಾ ಸಂಸ್ಥೆ. ನಮ್ಮ ಮುಖ್ಯ ಆಸಕ್ತಿ-ಪರಿಸರ ಸಂರಕ್ಷಣೆ, ಮಾನವ ಹಕ್ಕುಗಳ ರಕ್ಷಣೆ, ಪರ್ಯಾಯ ಚಿಂತನೆ ಇತ್ಯಾದಿ.

ಸ್ವಸ್ಥ, ಸಮಾನತೆಯ, ಆರೋಗ್ಯಕರ ಸಮಾಜ ಸೃಷ್ಟಿ ಸಮಾನ ಮನಸ್ಕರ ಸಹಕಾರದಿಂದ ಸಾಧ್ಯ ಎಂಬುದು ನಮ್ಮ ನಂಬಿಕೆ.

ಪುಸ್ತಕ ಮತ್ತು ವಾರ್ತಾಪತ್ರ ಪ್ರಕಟಣೆ, ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಶಿಬಿರಗಳನ್ನೇರ್ಪಡಿಸುವುದು ಮತ್ತು ಗಿಡ ನೆಡುವ ಕಾರ್ಯಕ್ರಮ-ನಮ್ಮ ಇನ್ನಿತರ ಚಟುವಟಿಕೆಗಳು.

ಈ ಪುಸ್ತಕ 'ಪರ್ಯಾಯ ಮಾಲಿಕೆ'ಯಲ್ಲಿ ಮೊದಲ ನೆಯದು.

ಸಂಯೋಜಕರು
ಪ್ರೊಟೆಕ್ಟ್
ಬೆಂಗಳೂರು.

# "ಪ್ರತಿದಿನವೂ ಭೂಮಿದಿನ"

ರಾಜಸ್ಥಾನದ ಜೋಧಪುರದ ಹೆಣ್ಣುಮಗಳು ಅಮೃತಾದೇವಿ, ಮಹಾರಾಜ ಅಜಿತ್‌ಸಿಂಹನ ಆಳುಗಳು ಮರಕಡಿಯಲು ಬಂದಾಗ ಮರ ತಬ್ಬಿಕೊಂಡು, ತನ್ನ ಜೊತೆಯ 363 ಸಂಗಾತಿಗಳೊಡನೆ ಕಟುಕರ ಕೊಡಲಿಗೆ ಬಲಿಯಾದಳು. ಪರಿಸರ ರಕ್ಷಣೆಯ ಪ್ರಕ್ರಿಯೆ ಪ್ರಾರಂಭವಾದದ್ದು ಭೂಮಿ ರಕ್ತದಿಂದ ನೆನೆದ ನಂತರವೇ.

ಯಮುನಾ ಘಾಟಿಯ ಪುರೋಲಾದಲ್ಲಿ ಮರಕಡಿಯಲು ಬಂದ ಅಹ್ಮದಾಬಾದ್‌ನ ಆಟದ ಸಾಮಗ್ರಿಗಳ ಸಂಸ್ಥೆಯ ಗುತ್ತಿಗೆದಾರ ಹೆಣ್ಣು ಮಕ್ಕಳ ಪ್ರತಿಭಟನೆಗೆ ಹೆದರಿ ಓಡಿಹೋದ. ಸರ್ಕಾರದ ಪರವಾಗಿ ವಾದಿಸಲು ಬಂದ ಅಧಿಕಾರಿಗಳನ್ನು ಆ ಜಾಣ ಹೆಣ್ಣು ಮಕ್ಕಳು ಬೆಳ್ಳಂ-ಬೆಳಗಿನಲ್ಲಿ ಲಾಟೀನು ಹಿಡಿದು ನೋಡಲು ಹೋದರು–ಅವರ ಅಜ್ಞಾನ ತೋರಿಸಲು ಮತ್ತು ತೊಲಗಿಸಲು. ಅಧಿಕಾರಿಗಳ ಕಾಡೇನು ಕೊಡುತ್ತದೆ ಎಂಬ ಪ್ರಶ್ನೆಗೆ ಬಚ್ನಿದೇವಿ ಹೇಳಿದಳು 'ಕಾಡು ಕೊಡುತ್ತದೆ. ಮಣ್ಣು, ನೀರು ಅದೇ ನಮ್ಮ ಜೀವನಾಧಾರ'. ಚಿಪ್ಕೋದ ಉಗಮ. ಪೋಲೀಸರಿಂದ ಹೆಣ್ಣು ಮಕ್ಕಳ ಬಂಧನ. ಬಹುಗುಣದ ರಂಗಪ್ರವೇಶ. ಚಿಪ್ಕೋ ಇಂದು ದೇಶ ವಿದೇಶಗಳಲ್ಲಿ ಪ್ರಖ್ಯಾತ.

ಈ ಭೂಮಿ ಹುಟ್ಟಿದ್ದು 500 ಕೋಟಿ ವರ್ಷಗಳ ಹಿಂದೆ. ಇಲ್ಲಿ ಮನುಷ್ಯ ಕಾಣಿಸಿಕೊಂಡಿದ್ದು 20 ಲಕ್ಷ ವರ್ಷಗಳ ಹಿಂದೆ ಲಕ್ಷಾಂತರ ವರ್ಷಗಳಲ್ಲಿ ನಿಧಾನವಾಗಿ ವಿಕಾಸಗೊಂಡು ಭೂಮಿಯ ಮೇಲ್ಮೈಯ ಪ್ರತಿಶತ 30 ರಷ್ಟು ಭಾಗವನ್ನು ಆವರಿಸಿರುವ ಕಾಡುಗಳು ಪ್ರಕೃತಿ ನಿರ್ಮಿಸಿಕೊಂಡ ವಿಶಿಷ್ಟ ಪರಿಸರ ವ್ಯವಸ್ಥೆ. ಕಾಡುಗಳು ಭಾಷ್ಪೀಕರಣವನ್ನು ಕಡಿತಗೊಳಿಸಿ ಹೆಚ್ಚು ಮಳೆ ಬರುವಂತೆ ಮಾಡುತ್ತವೆ. ಭೂಮಿಯ ಮೇಲೆ ಬೀಳುವ ಸೂರ್ಯನ ಕಿರಣಗಳನ್ನು ಕಾಡು ಆಕರ್ಷಿಸಿ, ವಾತಾವರಣಕ್ಕೆ ಹಿಂದಿರುಗುವ ಕಿರಣಗಳ ಪ್ರಮಾಣವನ್ನು ಕಮ್ಮಿ ಮಾಡುತ್ತದೆ. ಕಾಡಿನ ಮೇಲೆ ಚಲಿಸುವ ಗಾಳಿಯ ವೇಗ ಘರ್ಷಣೆಯಿಂದ ಕಡಿಮೆಯಾಗಿ, ಆರ್ದ್ರತೆ ಮೇಲೇರಿ ಮಳೆ ಹೆಚ್ಚುತ್ತದೆ. ಗಿಡಮರಗಳು, ಮೋಡ ಮತ್ತು ಮಂಜಿನಿಂದ ನೀರಿನ ಹನಿಗಳನ್ನು ಹೀರುತ್ತವೆ. ಮರಗಿಡಗಳ ಜೈವಿಕ ಉತ್ಪನ್ನಗಳು ನೀರನ್ನು ಬೇಗ ತಂಪುಗೊಳಿಸುತ್ತದೆ. ಇಂಗಾಲಾಮ್ಲವನ್ನು ಹೀರಿಕೊಂಡು ದ್ಯುತಿ ಸಂಶ್ಲೇಷಣೆ ನಡೆಸಿ, ಆಹಾರ ಉತ್ಪಾದಿಸುತ್ತದೆ. ಇಂಗಾಲಾಮ್ಲದಿಂದ ಉಂಟಾಗುವ ಭೂಶಾಖ ಹೆಚ್ಚಳದ ಪ್ರತಿಶತ 25ನ್ನು ಕಾಡು ತಡೆಯುತ್ತದೆ. ಪ್ರಪಂಚದಲ್ಲಿ ಇಂದು ಶೇ. 19 ರಷ್ಟು ಕಾಡಿದ್ದು, ಕಳೆದ ನಾಲ್ಕು ದಶಕಗಳಲ್ಲಿ ಜಗತ್ತಿನ ಅರಣ್ಯಗಳ ಅರ್ಧಭಾಗ ನಾಶವಾಗಿದೆ.

ಪ್ರಪಂಚದಲ್ಲಿ ಇಂದು ಉಳಿದಿರುವ ದಟ್ಟ ಮಳೆ ಕಾಡುಗಳ ವಿಸ್ತೀರ್ಣ, 1700 ದಶಲಕ್ಷ ಹೆಕ್ಟೇರು ಇದು ಒಟ್ಟು ಭೂ ವಿಸ್ತೀರ್ಣದ ಶೇ. 3 ಮಾತ್ರ! ಪ್ರತಿವರ್ಷ 20.4 ದಶಲಕ್ಷ ಹೆಕ್ಟೇರ್ ಕಾಡು ನಾಶ ಹಾಗೂ ಪ್ರಪಂಚದ ವಾರ್ಷಿಕ ಅರಣ್ಯ ಉತ್ಪನ್ನ ರೂ. 92400 ಕೋಟಿಯಷ್ಟಿದೆ. ಶೇ. 10 ರಿಂದ 12 ರಷ್ಟಿರುವ ಭಾರತದ ಕಾಡಿನ ಒಟ್ಟು ವಿಸ್ತೀರ್ಣ 30 ದಶಲಕ್ಷ ಹೆಕ್ಟೇರ್ ಇದರಲ್ಲಿ ಪ್ರತಿ ವರ್ಷ 1.5 ದಶಲಕ್ಷ ಹೆಕ್ಟೇರ್ ನಾಶವಾಗುತ್ತಿದ್ದು- 1957-71ರ ಅವಧಿಯಲ್ಲಿ, ಒಟ್ಟು 25 ದಶಲಕ್ಷ ಹೆಕ್ಟೇರ್ ಅರಣ್ಯ ನಾಶವಾಗಿದೆ.

ನಾವು 20ನೇ ಶತಮಾನದ ಕೊನೆಯ ದಶಕದಲ್ಲಿ ಕಾಲಿಟ್ಟಂತೆ, ನಮ್ಮ ಪರಿಸರ, ಆರ್ಥಿಕ ಸಮಸ್ಯೆಗಳು ನಮ್ಮನ್ನು ತೀವ್ರವಾಗಿ ಕಾಡಲಾರಂಭಿಸಿದೆ.

ತೀವ್ರ ಹಸಿವು, ಬಡತನ, ಹೆಚ್ಚುತ್ತಿರುವ ವಿದೇಶಿ ಸಾಲ, ಆಧುನಿಕ ಶಸ್ತ್ರಾಸ್ತ್ರೀಕರಣ, ನಶಿಸುತ್ತಿರುವ ಪರಿಸರ, ಕೊಲ್ಲುತ್ತಿರುವ ಹಣದುಬ್ಬರ-ಇವು ನಮ್ಮ ಅಭಿವೃದ್ಧಿಯ ಪರಿಕಲ್ಪನೆಯ, ಮರುಚಿಂತನೆಯ ಅವಶ್ಯಕತೆಯ ಬಗ್ಗೆ ಹೇಳುತ್ತಿವೆ. ನಮ್ಮ ಮುಂದಿರುವ ಮೂಲಭೂತ ಪ್ರಶ್ನೆ—ಅಭಿವೃದ್ಧಿ ಎಂದರೇನು ? ಮತ್ತು ಅದರ ಲಾಭ ಎಷ್ಟು ಜನಕ್ಕೆ ಎನ್ನುವುದು. ಪ್ರಗತಿಯ ಹೆಸರಿನಲ್ಲಿ ನಡೆಯುತ್ತಿರುವ ಈ ಎಲ್ಲಾ ಕ್ರಿಯೆಗಳು, ಪರಿಸರನಾಶ ಶಸ್ತ್ರಾಸ್ತ್ರೀಕರಣ, ದೊಡ್ಡ ನೀರಾವರಿ ಯೋಜನೆಗಳು, ಅಣುಸ್ಥಾವರಗಳ ಸ್ಥಾಪನೆ ಇವನ್ನೆಲ್ಲ ನಾವು ಸುಮ್ಮನೆ ಒಪ್ಪಬೇಕೆ ? ಅಪ್ಪಬೇಕೆ ?

ಭಾರತ ಪ್ರಪಂಚದಲ್ಲಿ ಹನ್ನೆರಡನೆಯ ಹೆಚ್ಚಿನ ಜೀವ ವೈವಿಧ್ಯವುಳ್ಳ ದೇಶ. ಅರಣ್ಯನಾಶ ಮತ್ತು ಮಾಲಿನ್ಯದಿಂದಾಗಿ ಪ್ರತಿದಿನ 140 ಜೀವ ಪ್ರಭೇಧಗಳು ನಾಶವಾಗುತ್ತಿವೆ. ಈಗಾಗಲೇ 724 ವಿವಿಧ ಜೀವ ಪ್ರಭೇಧಗಳು ಕಣ್ಮರೆಯಾಗಿ, 22,530 ಪ್ರಭೇಧಗಳು ನಿರ್ವಂಶದ ದಾರಿ ತುಳಿದಿವೆ.

ನಮ್ಮ ಅಭಿವೃದಿಯ ಪರಿಕಲ್ಪನೆ-ಇಷ್ಟು ವಿದ್ಯುತ್ ಬಳಸಿದರೆ ಪ್ರಗತಿ. ಇಷ್ಟು ಕ್ಯಾಲೋರಿ ತಿಂದರೆ ಆರೋಗ್ಯ, ತಲಾದಾಯ ಇಷ್ಟಿದ್ದರೆ, ಆರ್ಥಿಕ ಮುನ್ನಡೆ-ಇವು ಪಶ್ಚಿಮ ದೇಶಗಳಿಂದ ಎರವಲು ಪಡೆದವು. ಎರವಲು ಪಡೆದ ಎಲ್ಲಾ ಕಲ್ಪನೆಗಳು ಬೇರೆ ನೆಲದಲ್ಲಿ ವಿಫಲವಾಗುವ ಸಾಧ್ಯತೆ ಹೆಚ್ಚು. ಅಂತೆಯೇ ಈ ಕಲ್ಪನೆಗಳು ತಲೆಕೆಳಗಾಗಿ ಬಿದ್ದಿವೆ.

ಪಶ್ಚಿಮದಲ್ಲಿ ಈ ಪರಿಕಲ್ಪನೆಯ ಹಿಂದಿದ್ದ ತಾತ್ವಿಕ ಮನೋಭಾವಗಳು ಕೆಳಗಿನವು :—

* ಭೂಮಿ ಅಕ್ಷಯ-ಮನುಷ್ಯ ಅಜೇಯ-ಎಲ್ಲವೂ ಮನುಷ್ಯನ ಸುಖಕ್ಕಾಗಿಯೇ ಇರುವುದು.

* ವಿಜ್ಞಾನ/ತಂತ್ರಜ್ಞಾನಗಳ ನೆರವಿನಿಂದ ಏನನ್ನಾದರೂ ಗೆಲ್ಲಬಹುದು,

* ಯಂತ್ರಗಳಿಂದ ಕೆಲಸ ಮಾಡಿ. ಉಳಿದ ಸಮಯ/ಶ್ರಮದಿಂದ ಆರಾಮ ವಾಗಿರಬಹುದು.

ಭೂಮಿಯನ್ನು ಮೂಲವಸ್ತುವೆಂದು ಪರಿಗಣಿಸಿ. ಅದರ ದೋಚುವಿಕೆ ಯನ್ನು ಪ್ರಗತಿ ಎಂದು ಭಾವಿಸುವ ನಮ್ಮ ನಾಗರೀಕತೆ ಈಗ ಅದಕ್ಕಾಗಿ ತೆರಬೇಕಾಗಿರುವ ದಂಡ ಏನು ? ಎಂಬುದರ ಅರಿವು ಈಗೀಗ ನಮ ಗಾಗುತ್ತಿದೆ.

ಇಂದು ಭಾರತದ ಶೇ. 80 ರಷ್ಟು ಜನರಿಗೆ ಅನ್ನ ನೀಡುತ್ತಿರುವ ಕೃಷಿ ಕೂಡ ಈ ಅಭಿವೃದ್ಧಿಯೆಂಬ ಮರಿಚೀಕೆಗೆ ಹೊರತಾಗಿಲ್ಲ. ಪೂರ್ವಿಕರ ಬಹು ಬೆಳೆಗಳ ಬೇಸಾಯ ಪದ್ಧತಿ ನಾಶವಾಗುತ್ತಿದೆ. ಏಕರೀತಿಯ ಬೆಳೆಗಳಿಗೆ ಪ್ರೋತ್ಸಾಹ ಹೆಚ್ಚುತ್ತಿದೆ. ಇದರಿಂದ ಬೆಳೆಗಳಿಗೆ ಕಾಯಿಲೆ ತೀವ್ರವಾಗಿ ಹಬ್ಬುತ್ತದೆ. ಉತ್ಪಾದನೆಯೊಂದನ್ನೆ ಮಾನದಂಡವಾಗುಳ್ಳ ರೈತ ಹೆಚ್ಚು ಲಾಭಕ್ಕಾಗಿ ಗೊಬ್ಬರ. ಕೀಟನಾಶಕಗಳನ್ನು ಬಳಸಿ, ಭೂಮಿಯ ಉತ್ಪಾದನೆಗೆ ಮಿತಿ ಯಿದೆ ಎಂಬುದನ್ನು ಮರೆತು ಹೆಚ್ಚು ಶೋಷಿಸುತ್ತಾನೆ. ಭೂಮಿ ಸಾರ ಹೀನವಾಗಿ ಬಂಜರಾಗುತ್ತಿದೆ. ಭೂಸಾರ ಹೆಚ್ಚಿಸಲು ಗೊಬ್ಬರದ ಬಳಕೆ, ಗೊಬ್ಬರ ಜೈವಿಕ ಜೀವಿಗಳನ್ನು ನಾಶಮಾಡುವುದರಿಂದ, ಬೆಳೆಗಳಿಗೆ ತಗಲುವ ವಿವಿಧ ರೋಗಗಳಿಂದ ಬೆಳೆಯನ್ನು ರಕ್ಷಿಸಲು ಹೆಚ್ಚು ಹೆಚ್ಚು ಕೀಟನಾಶಕ- ಹೀಗೊಂದು ವಿಷವೃತ್ತದಲ್ಲಿ ರೈತ ಸಿಲುಕಿ ಲಾಭ ಕಮ್ಮಿಯಾಗಿ, ಉತ್ಪಾದನಾ ವೆಚ್ಚ ಹೆಚ್ಚಿ ದಿಗ್ಭ್ರಾಂತನಾಗುತ್ತಾನೆ.

ಇಂದು ಅಮೇರಿಕಾ. ಇಂಗ್ಲೆಂಡಿಗೆ ಹೋಲಿಸಿದರೆ, ಭಾರತದಲ್ಲಿ ಮನುಷ್ಯನ ದಿನನಿತ್ಯದ ಆಹಾರದಲ್ಲಿ 40 ಪಟ್ಟು ಹೆಚ್ಚು ಡಿ.ಡಿ.ಟಿ. ಮತ್ತು ಬಿ.ಹೆಚ್.ಸಿ. ಇದೆ. ಇವುಗಳ ಸಂಚಯ ದೇಹದಲ್ಲಿ ಹೆಚ್ಚುತ್ತಲೆ ಹೋಗುತ್ತದೆ. ನಾರ್ಟನ್ ಮತ್ತು ಕಾಸ್ವೆಯವರ ಪ್ರಕಾರ, ಆಧುನಿಕ ಕೃಷಿ ಮತ್ತು ಅವರ ರಕ್ಷಣೆ ಎಂಬುದು, ಹೆಚ್ಚು ಹೆಚ್ಚು ಕೀಟನಾಶಕ ಮತ್ತು ಗೊಬ್ಬರಗಳನ್ನು ಬಳಸುವ ಒಂದು ವ್ಯವಹಾರವಾಗಿ ಪರಿಣಮಿಸಿದೆ, ಭಾರತದಲ್ಲಿ ಹಸಿರು ಕ್ರಾಂತಿಯಿಂದ

ಕೃಷಿ ಉತ್ಪಾದನೆ ಹೆಚ್ಚಿಸಿದರೂ, ಹಳ್ಳಿಗಳಲ್ಲಿ ಬಡವರು ಬಡವರಾಗೇ ಉಳಿದಿದ್ದಾರೆ. UNO. ರವರ ಒಂದು ಸಮೀಕ್ಷೆಯಂತೆ, ಪಿಯರ್ಸ್ ಎಂಬುವರ ಅಧ್ಯಾಯನದ ಪ್ರಕಾರ, ಎಲ್ಲೆಲ್ಲಿ ಮೊದಲಿನಿಂದ ಆರ್ಥಿಕ ಅಸಮಾನತೆ ರೂಢಿಯಲ್ಲಿತ್ತೋ ಅಲ್ಲೆಲ್ಲ ಹಸಿರು ಕ್ರಾಂತಿಯಿಂದ ಬಹು ಸಂಖ್ಯಾತರ ಪಾಲಿಗೆ ದಾರಿದ್ರ್ಯ ಹೆಚ್ಚಿದೆ.

ಇಂದು ಅರಣ್ಯನಾಶದ ತೀವ್ರತೆ ನೋಡಿದರೆ ಭಯವಾಗುತ್ತದೆ. ಇದೇ ತಮ್ಮ ಜೀವನದ ಕೊನೆಯ ಲಾಭದಾಯಕ ಕಾರ್ಯವೇನೋ ಎಂಬಂತೆ ಎಲ್ಲರೂ ಅರಣ್ಯನಾಶಕ್ಕೆ ತಮ್ಮ ತಮ್ಮ ದೇಣಿಗೆ ಸಲ್ಲಿಸುತ್ತಿದ್ದಾರೆ. ಉದ್ಯಮಕ್ಕೆ ಅರಣ್ಯ ಪರಭಾರೆ ಮಾಡುವ ಸರ್ಕಾರ, ಒಂದಕ್ಕೆ ನೂರು ಮರ ಕಡಿಯುವ ಗುತ್ತಿಗೆದಾರ, ಇದನ್ನು ಸ್ವಂತ ಲಾಭಕ್ಕೆ ಬೆಂಬಲಿಸುವ ಅಧಿಕಾರಿ, ಪಟ್ಟಣಿಗರ ಐಶಾರಾಮೀ ಜೀವನ. ಇವೆಲ್ಲ ಅರಣ್ಯ ನಾಶಕ್ಕೆ ಕಾರಣವಾಗಿ ಮುಂದಿನ ಜನಾಂಗ "ಪರಿಸರ ನಿರಾಶ್ರಿತರೆಂಬ" ಹಣೆಪಟ್ಟಿಯೊಡನೆ ಬದುಕಬೇಕಾಗಿ ಬರಬಹುದು.

ಭಾರತದಲ್ಲಿ ಇಂದು ಶೇ. 80 ರಷ್ಟು ಭೂಪ್ರದೇಶದಲ್ಲಿ ಅರಣ್ಯ ಬೆಳೆಸಬಹುದಾದ ವಾತಾವರಣವಿದ್ದರೂ ಅರಣ್ಯ ಇರುವುದು ಶೇ. 12 ಭಾಗದಲ್ಲಿ ಮಾತ್ರ. ಇಲ್ಲಿ 64.2 ಮಿಲಿಯನ್ ಹೆಕ್ಟೇರ್ ಕಾಡಿದ್ದು, ಪ್ರತಿವರ್ಷ 1.8 ದಶಲಕ್ಷ ಮಿಲಿಯನ್ ಹೆಕ್ಟೇರ್ ಕಾಡು ನಾಶವಾಗುತ್ತಿದೆ. ಸ್ವತಂತ್ರ ಬಂದಾಗ 15 ಕೋಟಿ ರೂ. ಇದ್ದ ಅರಣ್ಯ ಹುಟ್ಟುವಳಿ 1974-75 ರಲ್ಲಿ 1144 ಕೋಟಿ ರೂ. ಗೇರಿದೆ. 1980-85ರ ಪಂಚವಾರ್ಷಿಕ ಯೋಜನೆಯಲ್ಲಿ ಅರಣ್ಯೀಕರಣಕ್ಕೆ ಹಿಂದಿನ 30 ವರ್ಷಗಳಲ್ಲಿ ಮಾಡಿದ ವೆಚ್ಚಕ್ಕಿಂತಲೂ ಶೇ. 30 ರಷ್ಟು ಖರ್ಚು ಹೆಚ್ಚು ಮಾಡಿದ್ದರೂ, ಬೆಳೆದ ಅರಣ್ಯ 0.3 ಮಿಲಿಯನ್ ಹೆಕ್ಟೇರ್. ಹಿಂದಿನ ನಾಶದ ನಷ್ಟ ಭರ್ತಿಯಾಗಬೇಕಾದರೆ, ವರ್ಷಕ್ಕೆ ಒಂದು ಮಿಲಿಯನ್ ಹೆಕ್ಟೇರ್ ಕಾಡು ನೆಡಬೇಕಾದ ಅವಶ್ಯಕತೆ ಇದೆ.

ಇಂದು ನಮ್ಮ ಹಳ್ಳಿಗಳಲ್ಲಿ ಪ್ರತಿದಿನ ಎರಡೂವರೆ ಗಂಟೆಯಷ್ಟು ಸಮಯ, ಕಟ್ಟಿಗೆ ಸಂಗ್ರಹಕ್ಕೆ ವ್ಯಯವಾಗುತ್ತಿದೆ. ಮಕ್ಕಳೂ ಈ ಕೆಲಸ ಮಾಡಬೇಕಾಗಿರುವುದರಿಂದ, ಅವರ ವಿದ್ಯಾಭ್ಯಾಸ ಕಟ್ಟಿಗೆಗೆ ಬಲಿಯಾಗುತ್ತಿದೆ. ಒಂದು ಸಮೀಕ್ಷೆಯ ಪ್ರಕಾರ, ಒಂದು ಕೆ.ಜಿ. ಆಹಾರ ಬೇಯಿಸಲು, 1.2 ಕೆ.ಜಿ. ಉರುವಲಿನ ಅಗತ್ಯವಿದೆ. ಬೆಂಗಳೂರು ನಗರ ವರ್ಷಕ್ಕೆ 4,40,000 ಟನ್ ಕಟ್ಟಿಗೆ ಉಪಯೋಗಿಸುತ್ತಿದೆ. ಇಂದು ನಗರಕ್ಕೆ ಬರುವ ಪ್ರತಿ ಐದು ಟ್ರಕ್ಕಿನಲ್ಲಿ ಒಂದು ಟ್ರಕ್ ಮತ್ತು ಪ್ರತಿ ಹತ್ತು ರೇಲ್ವೆ ವ್ಯಾಗನ್‌ಗಳಲ್ಲಿ ಒಂದು ವ್ಯಾಗನ್ ಕಟ್ಟಿಗೆ ಸಾಗಾಣಿಕೆಗೆ ಮೀಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಉರುವಲಿನ ಕೊರತೆಯಿಂದ ಪ್ರತಿವರ್ಷ 600 ಕೋಟಿ ಟನ್ನಿಗೂ ಹೆಚ್ಚು ಕೃಷಿ-ಕಸಕಡ್ಡಿಗಳನ್ನು ಸುಡಲಾಗುತ್ತಿದೆ 1972ರಲ್ಲಿ ಭಾರತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯವರ ಸಮೀಕ್ಷೆಯಂತೆ, ಭಾರತದಲ್ಲಿರುವ 237 ಮಿಲಿಯನ್ ಪಶುಗಳಿಂದ 575 ಮಿಲಿಯನ್ ಟನ್ ಸಗಣಿ ಬರುತ್ತಿದೆ. ಇದನ್ನು ಅನಿಲವಾಗಿ ಪರಿವರ್ತಿಸಿದರೆ, 22,424 ಮಿ. ಘನ ಮೀ. ಟನ್ ಅನಿಲ ಸಿಗಬಹುದಾಗಿದ್ದು, ಇದು ನಮ್ಮ ಹಳ್ಳಿಗಳ ಮೂರನೆ ಒಂದು ಭಾಗ ಹಳ್ಳಿಗಳಿಗೆ ಸಾಕು. ಸಗಣಿಯ ಜೊತೆ ಕೃಷಿ ಕಡ್ಡಿಗಳು, ಅಂತರ ಗಂಗೆಯಂತಹ ಕಳೆ, ಇದನ್ನೆಲ್ಲ ಅನಿಲ ಉತ್ಪಾದನೆಗೆ ಬಳಸಬಹುದು.

ಅರಣ್ಯನಾಶವಲ್ಲದೆ ಭೂಗೋಳನಾಶಕ್ಕೆ ವೇಗವರ್ಧಕ ಸೇರಿಸಿರುವುದು ವಾಯು ಮಾಲಿನ್ಯ. ಮಾನವನ ಚಟುವಟಿಕೆಗಳಿಂದ 19.7ರಲ್ಲಿ 5.9 ಬಿಲಿಯನ್ ಟನ್ ಇಂಗಾಲ ವಾತಾವರಣಕ್ಕೆ ಸೇರಿದೆ. ಇದರಲ್ಲಿ ಭಾರತದ ಪಾಲು 230 ಮಿಲಿಯನ್ ಟನ್, ಕಾರ್ಖಾನೆಗಳ ತೀವ್ರ ಹೆಚ್ಚಳ, ಪೆಟ್ರೋಲ್, ಡೀಸಲ್, ಕಲ್ಲಿದ್ದಲು, ಸೌದೆಗಳ ದಹನ, ತೈಲ ಸಂಸ್ಕರಣ ಕೇಂದ್ರಗಳ ಚಟುವಟಿಕೆ, ವಾಹನಗಳ ಅಪರಿಮಿತ ಬಳಕೆ, ಪರಮಾಣು ಬಾಂಬ್‌ಗಳ ಪ್ರಯೋಗ ಮತ್ತು ರಾಸಾಯನಿಕ ಯುದ್ಧ ಸಾಮಗ್ರಿಗಳ ಬಳಕೆಯಿಂದ ವಾಯುಗೋಲ ಪೂರ್ತಿ ಕೆಟ್ಟಿದೆ,

ಇಂದು ಪ್ರಪಂಚದಲ್ಲಿನ 105 ಮಿಲಿಯನ್ ವಾಹನಗಳು, 3.5 ಲಕ್ಷ ಟನ್ ಇಂಗಾಲವನ್ನು ಮತ್ತು ಕಾರ್ಖಾನೆಗಳು 147 ಮಿಲಿಯನ್ ಟನ್ ವಿಷಾನಿಲವನ್ನು ಚಿಮಣಿಗಳ ಮೂಲಕ ವಾತಾವರಣಕ್ಕೆ ಸೇರಿಸುತ್ತಿವೆ. ಪ್ರತಿ ವರ್ಷ ಇಂಗಾಲಾಮ್ಲ ಶೇ. 4.3 ರಷ್ಟು ಹೆಚ್ಚುತ್ತಿದೆ. 1972ರಲ್ಲಿ 1200 ಕೋಟಿ ಟನ್ ಇಂಗಾಲಾಮ್ಲ ವಾತಾವರಣಕ್ಕೆ ಸೇರಿದ್ದು, ಅದು ಕ್ರಿ. ಶ. 2025ರ ಹೊತ್ತಿಗೆ 1.78.000 ಮಿಲಿಯನ್ ಟನ್ ಆಗಲಿದೆ.

ಇಂದು ನಮ್ಮ ಹಳ್ಳಿಗಳಲ್ಲಿ ಹೆಣ್ಣು ಮಕ್ಕಳು ಒಲೆಯ ಮುಂದಿನ ಎರಡು ಗಂಟೆಗಳಲ್ಲಿ, 20 ಪ್ಯಾಕ್ ಸಿಗರೇಟ್ ಸೇವನೆಗೆ ಸಮನಾದ, ಕ್ಯಾನ್ಸರ್ ಕಾರಿ ಬೆಂಜೋ ಪೈರೀನ್ ಸೇವಿಸುತ್ತಾರೆ. ಅಲ್ಲದೆ ಹೊಗೆಯಲ್ಲಿನ ಫಾರ್ಮಾಲ್ಡಿಹೈಡ್‌ನಿಂದ ಶ್ವಾಸಕೋಶದಲ್ಲಿ ಹುಣ್ಣಾಗುತ್ತದೆ. ಇಂಗಾಲಾಮ್ಲ ಕೆಂಪು ರಕ್ತಕಣಗಳನ್ನು ನಾಶ ಮಾಡುವುದರಿಂದ ರಕ್ತದ ಕೊರತೆಯಿಂದ ಸಾವು ನಿಶ್ಚಿತ. ಇಂದು ಒಂದು ಟನ್ ಕಲ್ಲಿದ್ದಲು ಉರಿಸಿದಾಗ ಬರುವ ಹೊಗೆಗಿಂತ ಐನೂರು ಪಟ್ಟು ಹೆಚ್ಚಿನ ಮಾಲಿನ್ಯ ಅಡಿಗೆ ಒಲೆಗಳಿಂದ ಉಂಟಾಗುತ್ತಿದೆ,

1984ರಲ್ಲಿ ಇದ್ದ 48 ಶಾಖೋತ್ಪನ್ನ ಕೇಂದ್ರಗಳಲ್ಲಿ, 31ರಲ್ಲಿ ಮಾಲಿನ್ಯ ಹತೋಟಿಗೆ, ಯಾವ ಸಾಧನಗಳೂ ಇರಲಿಲ್ಲ. ಆ ಸ್ಥಾವರಗಳಲ್ಲಿದ್ದ ಉಪ ಕರಣಗಳು ಕೆಲಸ ಮಾಡುತ್ತಿರಲಿಲ್ಲ. ಶೇ. 60 ರಷ್ಟು ವಿದ್ಯುತ್ ಉತ್ಪಾದಿ ಸುವ ಇವು, ಪ್ರತಿದಿನ 500 ಟನ್ ಗಂಧಕಾಮ್ಲ ಮತ್ತು ಶೇ. 25-40 ರಷ್ಟು ಬೂದಿಯನ್ನು ವಾತಾವರಣಕ್ಕೆ ತುಂಬುತ್ತಿದೆ. ಇದಲ್ಲದೆ ರಸಗೊಬ್ಬರ ಕಾರ್ಖಾನೆಗಳಿಂದ, ಬಟ್ಟೆಗಿರಣಿಗಳಿಂದ ತೈಲ ಸಂಸ್ಕರಣಾ ಕೇಂದ್ರಗಳಿಂದ ಮಾಲಿನ್ಯ ವಾತಾವರಣ ಸೇರುತ್ತಲೇ ಇದೆ.

ಕಾರ್ಖಾನೆಗಳ ತೀವ್ರ ಹೆಚ್ಚಳ, ಅರಣ್ಯನಾಶ, ಇಂಧನಗಳ ದಹನ, ತೈಲಸಂಸ್ಕರಣೆ, ವಾಹನಗಳ ಅಪರಿಮಿತ ಬಳಕೆ, ರಸಾಯನಿಕ ಯುದ್ಧ ಸಾಮಾಗ್ರಿ, ಕೀಟನಾಶಕಗಳು ಮತ್ತು ಪರಮಾಣು ಬಾಂಬುಗಳ ಪ್ರಯೋಗ ದಿಂದ ವಾಯುಗೋಲ ಹದಗೆಟ್ಟು ಹೋಗಿದೆ. 1981ರಲ್ಲಿ 5 ದಶಲಕ್ಷ ಇದ್ದ

03223
E-120
COMMUNITY HEALTH CELL
LIBRARY AND DOCUMENTATION UNIT
BANGALORE

ವಾಹನಗಳು. 1992ರಲ್ಲಿ ಹದಿನೈದು ದಶಲಕ್ಷಕ್ಕೆ ಏರಿತು. ಜನಸಂಖ್ಯೆ ಹೆಚ್ಚಳ ಸರಾಸರಿ 2 ಇದ್ದರೆ, ವಾಹನಗಳು ಶೇ. 12ರಷ್ಟು ಹೆಚ್ಚುತ್ತಿವೆ. ಬಾಂಬೆ, ಕಲ್ಕತ್ತ, ದೆಹಲಿ ಪ್ರಪಂಚದ ಅತೀ ಕಲುಷಿತ ನಗರಗಳ ಪಟ್ಟಿಯಲ್ಲಿ ಸೇರಿವೆ. ವಾತಾವರಣದಲ್ಲಿ ಮಾಲಿನ್ಯ ಹೆಚ್ಚಿದಷ್ಟೂ ಸಸ್ಯಗಳಲ್ಲಿ ದ್ಯುತಿ ಸಂಶ್ಲೇಷಣೆ ಸಾಮರ್ಥ್ಯ ಕಡಿಮೆ ಆಗುತ್ತದೆ. ಇಂಗಾಲಾಮ್ಲ ವಾತಾವರಣದಲ್ಲಿ ಹೆಚ್ಚುತ್ತದೆ. ಕೈಗಾರಿಕೀಕರಣದ ನಂತರ ವಾತಾವರಣದಲ್ಲಿ ಇಂಗಾಲಾಮ್ಲದ ಪ್ರಮಾಣ ಪ್ರತಿಶತ 26ರಷ್ಟು ಏರಿದೆ. ವಾರ್ಷಿಕ ಹೆಚ್ಚಳ ಶೇ. 4.3 ರಷ್ಟಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿನ ಶೇ. 5 ರಷ್ಟು ಜನ ವರ್ಷಕ್ಕೆ 5 ಸಾವಿರ ಕೆ.ಜಿ. ಇಂಧನ ಉರಿಸಿ. ಪ್ರತಿಶತ 22 ರಷ್ಟು ಇಂಗಾಲಾಮ್ಲವನ್ನು ವಾತಾವರಣಕ್ಕೆ ತುಂಬಿದರೆ, ಪ್ರಪಂಚದ ಶೇ. 16 ರಷ್ಟು ಜನರಿರುವ ಭಾರತೀಯರು ಸರಾಸರಿ 250 ಕೆ.ಜಿ. ಇಂಧನ ಉರಿಸುತ್ತಾರೆ. ಇಂಗಾಲಾಮ್ಲದ ಸೇರ್ಪಡೆ ಶೇ. 3 ರಷ್ಟು ಮಾತ್ರ. ಇಂಗಾಲಾಮ್ಲದ ಹೆಚ್ಚಳ ತೀವ್ರವಾಗಿರುವುದರಿಂದ ವಾತಾವರಣ ಬಿಸಿ ಏರುತ್ತಿದೆ. 1990 ರಲ್ಲಿ ದಾಖಲೆಯಾದ ಭೂಮಿಯ ಮೇಲ್ಭಾಗದ ಉಷ್ಣತೆ, ಎಲ್ಲಾ ವರ್ಷಕ್ಕಿಂತ ಹೆಚ್ಚಾಗಿ ಇದ್ದಿತ್ತು. ಗಂಧಕಾಮ್ಲ ಮೂರು ಪಟ್ಟು ಹೆಚ್ಚು. ವಾತಾವರಣಕ್ಕೆ ಸೇರುತ್ತಿದ್ದು ಬಾನಿನಿಂದ ಹುಳಿ ಮಳೆ ಬೀಳುತ್ತಿದೆ. ಭೂಮಿಯಿಂದ 30 ಕಿ.ಮಿ. ಎತ್ತರದಲ್ಲಿರುವ ಓಜೋನ್ ಪದರ ಅಪಾಯಕಾರಿ, ಅತೀ ನೇರಳೆ ಕಿರಣಗಳನ್ನು ಸೋಸುತ್ತದೆ. ವಾತಾವರದಲ್ಲಿನ ಎಲ್ಲಾ ಓಜೋನ್‌ನನ್ನು ಒತ್ತಡಕ್ಕೊಳಪಡಿಸಿದರೆ, ಕೇವಲ ಮೂರು ಮಿಲಿಮೀಟರ್ ದಪ್ಪದ ಪದರವಾಗಬಹುದು. ಈ ಪದರ ಜೀವಸೃಷ್ಟಿಯಲ್ಲಿ ವಹಿಸಿದ ಪಾತ್ರ, ಬಲು ಪ್ರಾಮುಖ್ಯವಾದದ್ದು. ಹವಾ ನಿಯಂತ್ರಣ ಯಂತ್ರಗಳಲ್ಲಿ, ಶೈತ್ಯಕಾರಕಗಳಲ್ಲಿ, ಸುಗಂಧದ ಫುಸ್ ಫುಸ್ ಡಬ್ಬಿಗಳಲ್ಲಿರುವ ಕ್ಲೋರೋಫ್ಲೋರೋಕಾರ್ಬನ್ ಸಂಯುಕ್ತಗಳು ಓಜೋನ್ ಪದರದ ಮುಖ್ಯ ಶತ್ರು ಸಿ.ಎಫ್.ಸಿ.ಮೇಲಣ ವಾತಾವರಣದಲ್ಲಿ ಒಡೆದು, ಮುಕ್ತ ಕ್ಲೋರಿನ್ ಅಣುವನ್ನು ಬಿಡುಗಡೆ ಮಾಡುತ್ತದೆ. ಈ ಕ್ಲೋರಿನ್ ಓಜೋನ್‌ನನ್ನು ಮುತ್ತಿ ಅದನ್ನು ವಿಭಜಿಸುವುದರಿಂದ ವಾತಾವರಣದಲ್ಲಿ ಓಜೋನ್ ಪ್ರಮಾಣ ಕಮ್ಮಿಯಾಗುತ್ತಾ ಹೋಗಿ, ಜನರ ಆರೋಗ್ಯದ ಮೇಲೆ ತೀವ್ರ ಪರಿಣಾಮ ಆಗುತ್ತದೆ. 1987ರ ವರೆಗೆ ವಾತಾವರಣಕ್ಕೆ ಸೇರಿದ ಸಿ.ಎಫ್.ಸಿ. ಪ್ರಮಾಣ ಹದಿನೈದು ಲಕ್ಷ ಟನ್.

ಮತ್ತು ಒಂದು ಸಿ.ಎಫ್.ಸಿ. ಕಣದ ಜೀವಾವಧಿ ನೂರು ವರ್ಷ, ಇದರಿಂದ ಆಗಬಹುದಾದ ಹಾನಿ ಊಹೆಗೆ ಸಿಲುಕದು. ಇವೆಲ್ಲದರಿಂದ ಹಸಿರು ಮನೆ ಪರಿಣಾಮವುಂಟಾಗಿ ಭೂಮಿಯ ಶಾಖ ಏರುತ್ತಿದೆ. 1960-90ರವರೆಗೆ ಹಸಿರು ಮನೆ ಪರಿಣಾಮಕ್ಕೆ ಕಾರಣವಾದ ಅನಿಲಗಳ ಪ್ರಮಾಣ ಇಂತಿದೆ-ಇಂಗಾಲಾಮ್ಲ ಶೇ. 55 ಮೀಥೇನ್. ಶೇ. 15, ಸಿ.ಎಫ್.ಸಿ. ಶೇ. 22. ಸಾರಜನಕ ಆಕ್ಸೈಡ್‌ಗಳು ಶೇ. 6. ಇದೆಲ್ಲದರಿಂದ ಕ್ರಿ.ಶ. 2000ದ ಹೊತ್ತಿಗೆ ಉಷ್ಣತೆ 1.5 ರಿಂದ 4.0 °C ನಷ್ಟು ಏರಬಹುದೆಂದು ಅಂದಾಜು ಮಾಡಲಾಗಿದೆ.

ಭಾರತದಲ್ಲಿ ನಗರೀಕರಣದ ಸಮಸ್ಯೆ ತೀವ್ರವಾಗಿದೆ. 1951ರಲ್ಲಿ 3030 ನಗರಗಳಲ್ಲಿನ ಜನಸಂಖ್ಯೆ 62 ದಶಲಕ್ಷ ಇದ್ದುದು, 1981ರಲ್ಲಿ 158 ದಶಲಕ್ಷಕ್ಕೇರಿತು. 1983ರಲ್ಲಿ ನಡೆದ ಸಮೀಕ್ಷೆಯೊಂದರಂತೆ, ನಗರಗಳ ವಾರ್ಷಿಕ ಖರ್ಚು (ಪ್ರಾಥಮಿಕ ಅವಶ್ಯಕತೆಗಳ ಪೂರೈಕೆಗೆ) ರೂ. 810 ಕೋಟಿ, 3294 ನಗರಗಳಲ್ಲಿ ಹೆಚ್ಚಿನ ಜನಸಂಖ್ಯೆಗೆ ಶುದ್ಧ ನೀರು ಸಿಗುತ್ತಿಲ್ಲ. ನೀರಿನ ನಿರ್ವಹಣೆಯಲ್ಲಿನ ನಷ್ಟ ಶೇ. 30 ರಿಂದ, 40. ಮನುಷ್ಯ ವಿಸರ್ಜಿಸುವ 250 ಗ್ರಾಂ ಮಲವಲ್ಲಿ ಶೇ. 30 ಹಾಗೆಯೇ ಉಳಿದು, ಪರಿಸರಕ್ಕೆ ತೀವ್ರ ಹಾನಿ ಉಂಟುಮಾಡುತ್ತಿದೆ. ಕಸದ ವಿಸರ್ಜನೆಗೆ ಮತ್ತು ನಾಶಕ್ಕೆ ಕಾಯ್ದಿಟ್ಟ ಮೊತ್ತ, ಒಟ್ಟು ತಲಾದಾಯದ ಶೇ. 0.2 ಮಾತ್ರ! ಶ್ರೀಮಂತರೇ ಹೆಚ್ಚು ಪರಿಸರ ಪೀಡಕರು. ಹೆಚ್ಚು ಹೆಚ್ಚು ತ್ಯಾಜ್ಯದ ಉತ್ಪಾದಕರು. 3119 ನಗರಗಳಲ್ಲಿ ಉಚ್ಛಿಷ್ಟಗಳನ್ನು ಸಂಪೂರ್ಣ ಶುದ್ಧೀಕರಿಸುವ ನಗರಗಳು ಕೇವಲ 81 209 ನಗರಗಳಲ್ಲಿ ಆಂಶಿಕ ಸಂಸ್ಕರಣೆ, ಉಳಿದವು ಹಾಗೆಯೇ ತ್ಯಾಜ್ಯ ವಸ್ತುಗಳನ್ನು ನದಿ/ಸಮುದ್ರಕ್ಕೆ ಬಿಡುತ್ತವೆ. ಒಂದು ಲಕ್ಷಕ್ಕೂ ಮೀರಿದ ಜನಸಂಖ್ಯೆಯುಳ್ಳ 42 ನಗರಗಳಲ್ಲಿ ಮಾತ್ರ ಒಳಚರಂಡಿ ವ್ಯವಸ್ಥೆ ಇದೆ.

ಜೀವನಕ್ಕೆ ಅನ್ನದಷ್ಟೇ ಅಥವಾ ಅದಕ್ಕಿಂತ ಮುಖ್ಯವಾದ ಅವಶ್ಯಕತೆ ನೀರು. ನಲ್ಲಿಯನ್ನು ತಿರುಗಿಸಿದೊಡನೆ ನೀರು ಬರುವ ಪೇಟೆ ಪಟ್ಟಣಗಳಲ್ಲಿನ ಮಂದಿಗೆ ನೀರು ಎಂಥ ಅಮೂಲ್ಯ ವಸ್ತು ಎಂಬ ಭಾವನೆಯೇ

ಪಟ್ಟಿಲಾರದು. ಭೂಮಿಯ ಮೇಲಿರುವ ನೀರಿನಲ್ಲಿ ಶೇ. 97.2 ಭಾಗ ಉಪ್ಪು ನೀರು. ಅರ್ಧ ಗ್ಯಾಲನ್ ಒಟ್ಟು ನೀರಿನ ಪ್ರಮಾಣವಾದರೆ, ನೆಲದ ಮೇಲೆ ಹರಿಯುತ್ತಿರುವುದು ಕೇವಲ ಒಂದೇ ಒಂದು ಹನಿ ಮಾತ್ರ. ಇಂದು ನಮ್ಮ ದೇಶದಲ್ಲಿನ ನದಿಗಳಲ್ಲಿನ ಶೇ. 70ರಷ್ಟು ನೀರು ಕಲುಷಿತಗೊಂಡಿದೆ. ಈ ದೇಶದ ಕಾಯಿಲೆಗಳಲ್ಲಿ 2/3ರಷ್ಟು ಕಾಯಿಲೆ ಬರುವುದು ನೀರಿನಿಂದ. ಇದರಿಂದ 73 ಮಿಲಿಯನ್ ಕೆಲಸದ ದಿನಗಳು ಹಾಳಾಗುತ್ತಿದ್ದು, ಚಿಕಿತ್ಸೆಯ ವೆಚ್ಚ ಸೇರಿ, ರಾಷ್ಟ್ರಕ್ಕಾಗುತ್ತಿರುವ ನಷ್ಟ ರೂ. 600 ಕೋಟಿ.

ನಮ್ಮ ರಾಜ್ಯದ ಎಲ್ಲಾ ನದಿಗಳು ಇಂದು ಮಲಿನಗೊಂಡಿದೆ. ಕಾಳಿ, ಭದ್ರಾ, ತುಂಗಾ, ಕಾವೇರಿ, ನೇತ್ರಾವತಿ, ತುಂಗಭದ್ರಾ, ಹೇಮಾವತಿ ನದಿಗಳ ನೀರು, ಕಾರ್ಖಾನೆಗಳ ನೀರು, ನಗರಗಳ ಹೊಲಸು ನೀರು ಸೇರಿ ತೀರಾ ಕೆಟ್ಟಿದೆ. ನದಿಗಳು ಹೋಗಲಿ, ಅಂತರ್ಜಲ ಕೂಡ ಮಾಲಿನ್ಯಕ್ಕೆ ಹೊರತಾಗಿಲ್ಲ. ಕೈಗಾರಿಕಾ ಉಚ್ಚಿಷ್ಟಗಳು, ನಿಷ್ಕ್ರಿಯ ಜಡವಸ್ತುಗಳು, ರಾಸಾಯನಿಕಗಳು, ವಿಷಯುಕ್ತ ಪದಾರ್ಥಗಳು, ತೈಲ ಶುದ್ಧೀಕರಣ ಕೇಂದ್ರದ ಶೇಷ ವಸ್ತುಗಳು ಇವೆಲ್ಲವೂ ನದಿ ನೀರನ್ನು ಕಲುಷಿತಗೊಳಿಸುತ್ತಲೇ ಇವೆ. ಇವಲ್ಲದೆ, ತಂತ್ರಜ್ಞಾನದ ಅರಿವಿಲ್ಲದೆ, ನೀರಿನಲ್ಲಿನ ಜೀವರಾಶಿಗಳನ್ನು ನಾಶ ಮಾಡುತ್ತಿದ್ದೇವೆ. ನದಿ ನೀರಿನಲ್ಲಿ ಡೈನಾಮೈಟ್ ಸಿಡಿಸುವುದು, ವಿಷ ಸೇರಿಸುವುದು, ದೂರ ಸಮುದ್ರದಲ್ಲಿ ತೈಲ ಯಂತ್ರಗಳ ರಿಗ್ ನಿರ್ಮಾಣ, ಯಾಂತ್ರೀಕೃತ ದೋಣಿಗಳ ಮಿತಿಮೀರಿದ ಬಳಕೆ, ಇವುಗಳಿಂದ ಜೀವರಾಶಿ ನಾಶವಾಗುತ್ತಿವೆ. ದೊಡ್ಡ ಅಣೆಕಟ್ಟುಗಳು, ಜಲಾಶಯಗಳು, ನೀರಿನ ಸಹಜ ಗುಣಗಳನ್ನೇ ಕಳೆಯುತ್ತಿವೆ. ಮಿತಿ ಮೀರಿದ ಕಾಡಿನ ಕಡಿತ, ಮಳೆ ಬೀಳುವಿಕೆ ಮತ್ತು ಮಣ್ಣಿನ ಜಲ ಶೇಖರಣಾ ಗುಣವನ್ನೇ ಕಳೆದಿದೆ. ಇದರಿಂದ ಪ್ರವಾಹ ಮತ್ತು ಅತೀ ಮಣ್ಣಿನ ಕೊರತೆಯೂ, ಬೇಸಿಗೆಯಲ್ಲಿ ತೀವ್ರ ನೀರಿನ ಬರವೂ ಉಂಟಾಗುತ್ತಿದೆ. ಯಾವ ನದಿಗಳು ಜಲಚರಗಳಿಗೆ ತಾಣವಾಗಿದ್ದವೋ, ಅದೇ ನೀರಿನಲ್ಲಿ ಕೊಚ್ಚಿಕೊಂಡು ಬಂದ ಮಣ್ಣು ಮತ್ತು ರಾಸಾಯನಿಕಗಳು ತುಂಬಿ, ಕ್ರಮೇಣ ನದಿಗಳು, ಜಲ ಮರುಭೂಮಿಗಳಾಗುತ್ತಿವೆ.

ಭೂಮಿಯ ಮೇಲಿನ 97 ಭಾಗ ಉಪ್ಪುನೀರು ಉಳಿದ 3 ಭಾಗದಲ್ಲಿ ಶೇ. 67ರಷ್ಟು ನೀರು ಧ್ರುವ ಪ್ರದೇಶ, ನೀರ್ಗಲ್ಲು ನದಿಗಳಲ್ಲಿದ್ದರೆ, ಉಳಿದ 33 ಭಾಗ ಅಂತರ್ಜಲ, ಕೆರೆ. ಕೊಳ್ಳ, ಬಾವಿಗಳಲ್ಲಿದೆ. 3 ಲೀಟರ್ ನೀರಿದ್ದರೆ, ಅದರಲ್ಲಿ ನಮಗೆ ಸಿಗುವುದು 1/2 ಚಮಚ ಶುದ್ಧ ನೀರು ! ಭಾರತದಲ್ಲಿ ವಾರ್ಷಿಕ ಮಳೆ 1900 ಬಿಲಿಯನ್ ಘನ ಮೀಟರ್. ಇದರಲ್ಲಿ ಶೇ. 80ರಷ್ಟು ಹೊಳೆ, ಕೆರೆಗಳಿಗೆ ಹರಿಯುತ್ತದೆ. ಅರಣ್ಯ ನಾಶದಿಂದಾಗಿ ಮಣ್ಣು ನೀರನ್ನು ಓಡಿದಿಡುವ ಸಾಮರ್ಥ್ಯ ಕಳೆದುಕೊಂಡಿರುವುದರಿಂದ, ಮಳೆ ನೀರು ಬೇಗ ಆವಿಯಾಗಿ, ಜಲಸರಪಳಿಯೇ ಕಟ್ಟುಹೋಗಿದೆ. ದೇಶದಲ್ಲಿ 9.6 ದಶಲಕ್ಷ ಬಾವಿ, 4.6 ದಶಲಕ್ಷ ಕೊಳವೆ ಬಾವಿ, 7.15 ಲಕ್ಷ ಸಾರ್ವಜನಿಕ ಬಾವಿ ಮತ್ತು 12.4 ಲಕ್ಷ ವಿದ್ಯುತ್ ಮತ್ತು ಡೀಸಲ್/ವಿದ್ಯುತ್ ನೀರೆತ್ತುವ ಯಂತ್ರಗಳಿವೆ. ದೇಶದ ಶೇ. 50 ಭಾಗ ನೀರಾವರಿ ಆಗುವುದು ಅಂತರ್ಜಲದಿಂದ, ಅಂತರ್ಜಲದ ಗುಣಮಟ್ಟ ಮತ್ತು ಜಲಮಟ್ಟ ಎರಡೂ ಕೆಳಗಿಳಿಯುತ್ತಿದೆ. ಉಚ್ಛಿಷ್ಟಗಳ ಸೂಕ್ತ ವಿಸರ್ಜನಾ ವ್ಯವಸ್ಥೆ ಇಲ್ಲದಿರುವುದರಿಂದ, ಅವು ನೇರವಾಗಿ ನೆಲಕ್ಕಿಳಿದು ನೀರನ್ನು ಕಲುಷಿತಗೊಳಿಸುತ್ತಿವೆ. ಇದರಿಂದ ಮೊದಲೇ ಅನ್ನವಿಲ್ಲದೇ ನಿಶ್ಯಕ್ತರಾದ ಜನ ಬೇಗ ಕಾಯಿಲೆಗೆ ತುತ್ತಾಗುತ್ತಿದ್ದಾರೆ.

ಸಾಗರ ಮಾಲಿನ್ಯ ಇನ್ನೊಂದು ದೊಡ್ಡ ಸಮಸ್ಯೆ. ಪ್ರಪಂಚದಲ್ಲಿ ವಾರ್ಷಿಕ ತೈಲ ಸಾಗಾಣಿಕೆಯ ಪ್ರಮಾಣ 1300 ದಶಲಕ್ಷ ಟನ್ ಇದರಲ್ಲಿ ಶೇ. 43 ಭಾಗ ಅರೇಬಿಯನ್ ದೇಶಗಳಿಂದ ಬೇರೆಡೆಗೆ ಸಾಗಿಸಲ್ಪಡುತ್ತಿದೆ Exxon Valdez (ಎಕ್ಸಾನ್ ವಾಲ್ಡೆಜ್) ಅಲಾಸ್ಕಾದಲ್ಲಿ ಸಾಗರಕ್ಕೆ ಚೆಲ್ಲಿದ ಎಣ್ಣೆಯ ಪ್ರಮಾಣ 10 ದಶಲಕ್ಷ ಗ್ಯಾಲನ್. ಇದರ ಪರಿಣಾಮ 10 ರಿಂದ 15 ವರ್ಷ ಇರಬಹುದೆಂದು ಊಹಿಸಲಾಗಿದೆ. ಗ್ಯಾಸೊಲಿನ್ ಕೇಂದ್ರಗಳು ಪ್ರಪಂಚದಾದ್ಯಂತ ಪ್ರತಿವರ್ಷ ವಾತಾವರಣಕ್ಕೆ ವಿಸರ್ಜಿಸುವ ಬಳಸಿದ ತೈಲದ ಪ್ರಮಾಣ 350 ದಶಲಕ್ಷ ಟನ್, ಪ್ರತಿವರ್ಷ ಭಾರತದ ಸುತ್ತಲಿನ ಸಾಗರಕ್ಕೆ 10 ಲಕ್ಷ ಟನ್‌ಗೂ ಹೆಚ್ಚಿನ ತೈಲ ಸೇರುತ್ತಿದೆ. ಈ ಪುಟ ಓದಿ ಮುಗಿಸುವಷ್ಟರಲ್ಲಿ 2000 ಲೀಟರ್ ತೈಲ ಸಾಗರಕ್ಕೆ ಸೇರಿರುತ್ತಿದೆ.

8 ಯೋಜನೆಗಳಿಂದ 50,000 ಕೋಟಿ ರೂಗಳಿಗೂ ಹೆಚ್ಚು ಹಣ ನುಂಗಿದ ನಮ್ಮ ಭಾರೀ ನೀರಾವರಿ ಯೋಜನೆಗಳು ಅರಣ್ಯ ನಾಶದಿಂದುಂಟಾದ ಮಣ್ಣಿನ ಸವಕಳಿಯಿಂದ ತಮ್ಮ ಸಾಮರ್ಥ್ಯದಲ್ಲಿ ಶೇ. 30ರಷ್ಟನ್ನು ಕಳೆದುಕೊಂಡಿವೆ. ಇದರಿಂದ ಪ್ರತಿವರ್ಷ 60,000 ಹೆಕ್ಟೇರ್ ಜಮೀನು ನೀರಾವರಿಯಿಂದ ವಂಚಿತವಾಗುತ್ತಿದೆ. 25 ದಶಲಕ್ಷ ಹೆಕ್ಟೇರ್ ಕಾಡು ತಡೆಹಿಡಿಯುವ ನೀರಿನ ಪ್ರಮಾಣ ಭಾಕ್ರಾ ಜಲಾಶಯದ ಶೇಖರಣಾ ಸಾಮರ್ಥ್ಯದ 2 1/2ಯಷ್ಟು ಹೆಚ್ಚು ! 1951 ರಲ್ಲಿ ಉತ್ಪಾದಿಸಬಹುದಾದ ಜಮೀನು ಪ್ರತಿ ಪ್ರಜೆಗೆ 0.48 ಹೆಕ್ಟೇರ್ ಇದ್ದದ್ದು, ಇವತ್ತು 0.11 ಹೆಕ್ಟೇರ್‌ಗಿಳಿದಿದೆ. ಏಕರೀತಿಯ ಬೆಳೆಯ ತೀವ್ರ ಬೇಸಾಯದಿಂದಾಗಿ ಜೌಳುಪ್ಪು ಜಮೀನಿನಲ್ಲಿ ಮೇಲಕ್ಕೆ ಏರುತ್ತಾ ಬಂದು, 329 ದಶಲಕ್ಷ ಹೆಕ್ಟೇರ್ ಜಮೀನಿನಲ್ಲಿ 17.5 ದಶಲಕ್ಷ ಹೆಕ್ಟೇರ್ ಜಮೀನು ' ಪ್ರತಿವರ್ಷ ಬಂಜರಾಗುತ್ತಿದೆ. ಗೋಧಿಯ ಕಣಜವೆನಿಸಿದ್ದ ಪಂಜಾಬಿನ ಲೂಧಿಯಾನಾ, ಫರೀದ್ ಕೋಟ್, ಫಿರೋಜ್‌ಪುರ ಜಿಲ್ಲೆಗಳ 2.58 ಲಕ್ಷ ಹೆಕ್ಟೇರ್ ಜಮೀನು ಇಂದು ಏನನ್ನೂ ಬೆಳೆಯಲಾಗದ ಸ್ಥಿತಿಗಿಳಿದಿದೆ. ಈ ಜಮೀನಿನ ಪುನಶ್ಚೇತನಕ್ಕೆ 1988ರಲ್ಲಿ ವ್ಯಯಿಸಿದ ಹಣ ರೂ. 1739 ಕೋಟಿ. ಕೇಂದ್ರ ಮಣ್ಣು ಮತ್ತು ಜಲ ಸಂರಕ್ಷಣಾ ಸಂಶೋಧನೆ ಮತ್ತು ತರಬೇತಿ ಕೇಂದ್ರದ ವರದಿಯ ಪ್ರಕಾರ-ಭಾರತದಲ್ಲಿ ಮಣ್ಣು ಸವೆತದ ವಾರ್ಷಿಕ ಪ್ರಮಾಣ 5300 ದಶಲಕ್ಷ ಟನ್. ಮಣ್ಣಿನ ಜೊತೆ ಕೊಚ್ಚಿ ಹೋಗುವ ಲವಣಾಂಶ 5.4 ರಿಂದ 8 ದಶಲಕ್ಷ ಟನ್. ಇದರಿಂದ ವರ್ಷಕ್ಕೆ 30 ರಿಂದ 50 ದಶಲಕ್ಷ ಟನ್ ಆಹಾರ ಉತ್ಪಾದನೆ ಕಮ್ಮಿಯಾಗುತ್ತಿದೆ. ಕೊಚ್ಚಿ ಹೋಗುವ ಮಣ್ಣಿನಲ್ಲಿ 480 ದಶಲಕ್ಷ ಟನ್ ಜಲಾಶಯಕ್ಕೆ ಸೇರುತ್ತಿದೆ. ನಮ್ಮ ಸದ್ಯದ ಆಹಾರ ಉತ್ಪಾದನಾ ಪ್ರಮಾಣ 17.7 ಕೋಟಿ ಟನ್. ಕ್ರಿ.ಶ. 2000ದ ಹೊತ್ತಿಗೆ ಅದು 24 ಕೋಟಿ ಟನ್ ಆದರೆ ಮಾತ್ರ ಹಸಿವಿನ ಸಮಸ್ಯೆ ಇರುವುದಿಲ್ಲ. ಆದರೆ ಭೂಮಿನಾಶ, ಅದರ ಗುಣಮಟ್ಟ ನಾಶ ಇಷ್ಟು ತೀವ್ರವಾಗಿ ನಡೆಯುತ್ತಿರುವಾಗ ಭಾರತದ ರೂಪದಲ್ಲಿ ಸೋಮಾಲಿಯಾದ ಪಟ್ಟಿಗೆ ಇನ್ನೊಂದು ಸೇರ್ಪಡೆ ಖಂಡಿತ.

1991ರಲ್ಲಿ ಬಂಗಾಳಕೊಲ್ಲಿಯಲ್ಲಿ ಹಠಾತ್ತನೆ ಕಾಣಿಸಿಕೊಂಡ 11

ಕಿ.ಮೀ. ಅಗಲ 20 ಕಿ. ಮೀ. ಉದ್ದದ ಪರ್ಬಾಸ್ ದ್ವೀಪ ಹುಟ್ಟಿದ್ದು. ಬ್ರಹ್ಮಪುತ್ರ ಮತ್ತು ಗಂಗಾನದಿ ತಂದು ತುಂಬಿದ ಹೂಳಿನಿಂದ ಇಂದು ಉತ್ತರ ಭಾರತದ ಎಲ್ಲಾ ನದಿಗಳೂ ಪ್ರವಾಹಗಳಿಂದ ಜನರ ಬದುಕನ್ನು ಸರಕ ಮಾಡಿವೆ. ಒಂದೆಡೆ ತೀವ್ರ ಜಲಕ್ಷಾಮ, ಮತ್ತೊಂದೆಡೆ ಮಹಾಪೂರ. ಇವರಿಂದ ಹಾನಿಯಾಗುತ್ತಿರುವುದು ದರಿದ್ರರಿಗೆ. ಪ್ರವಾಹಗಳಿಂದ ನಾಶ ವಾಗುತ್ತಿರುವ ಜಮೀನಿನ ಪ್ರಮಾಣ 4 ದಶಲಕ್ಷ ಹೆಕ್ಟೇರ್‌ನಷ್ಟಿದೆ. ಅರಣ್ಯ ನಾಶ, ಅತೀ ಹೆಚ್ಚಿನ ಅನುಪಯೋಗಿ ಪಶುಗಳು, ವೈಜ್ಞಾನಿಕವಾಗಿ ಸೂಕ್ತ ವಲ್ಲದ ನೀರಿನ ಬಳಕೆ ವಿಧಾನಗಳು, ಕೃಷಿಭೂಮಿಯಲ್ಲಿನ ಸವಳು ಮತ್ತು ಅಸ್ವಾಭಾವಿಕ ಬೇಸಾಯ ಪದ್ಧತಿಗಳಿಂದ ಕೃಷಿಭೂಮಿಗಳು ನಿಧಾನವಾಗಿ ಬಂಜ ರಾಗುತ್ತಿವೆ. ಮರುಭೂಮೀಕರಣದಿಂದ ಪ್ರಪಂಚದಲ್ಲಿ ನೇರವಾಗಿ ಗುರಿ ಯಾಗುತ್ತಿರುವವರ ಸಂಖ್ಯೆ 230 ದಶಲಕ್ಷ, ಪ್ರತಿವರ್ಷ ಮರುಭೂಮಿಯಾಗು ತ್ತಿರುವ ಜಮೀನಿನ ಪ್ರಮಾಣ 3.5 ದಶಕೋಟಿ ಹೆಕ್ಟೇರ್. ದೀರ್ಘಕಾಲ ಮಳೆ ಇಲ್ಲದೆ ಮತ್ತು ತೀವ್ರ ಅರಣ್ಯ ನಾಶದಿಂದಾಗಿ ಒಂದು ಕಾಲದಲ್ಲಿ ಸರಸ್ವತಿ ನದಿಯಿಂದ ಹಸಿರಾಗಿದ್ದ ಥಾರ್ ಪ್ರದೇಶ ಇಂದು 3.2 ಲಕ್ಷ ಚದರ ಕಿ.ಮೀ. ವಿಸ್ತೀರ್ಣದ ಬೆಂಗಾಡಾಗಿದೆ. ಪ್ರತಿ ವರ್ಷ ಇದು 1 ಕಿ.ಮೀ.ನಷ್ಟು ವಿಸ್ತರಿ ಸುತ್ತಿದ್ದು, ಇದರಿಂದ 13,000 ಹೆಕ್ಟೇರ್ ಭೂಮಿ ನಿರುಪಯುಕ್ತ ವಾಗುತ್ತಿದೆ.

ಅತಿಯಾದ ಕೀಟನಾಶಕಗಳ ಬಳಕೆ.-ಭೂಮಿಯನ್ನು ಕೊಲ್ಲುತ್ತಿರುವ ಇನ್ನೊಂದು ವಿದ್ಯಮಾನ. ತೃತೀಯ ಜಗತ್ತಿನಲ್ಲಿ ಕೀಟನಾಶಕಗಳಿಂದ ಹಾನಿ ಗೀಡಾಗುತ್ತಿರುವವರ ಸಂಖ್ಯೆ 3 ದಶಲಕ್ಷ, ಅವರಲ್ಲಿ 2 ಲಕ್ಷ ಜನ ಪ್ರತಿವರ್ಷ ಸಾಯುತ್ತಿದ್ದಾರೆ. 1939 ರಿಂದ ಬಳಸಲಾಗುತ್ತಿರುವ ಡಿ.ಡಿ.ಟಿ. ಪ್ರಾರಂಭದ ದಿನಗಳಲ್ಲಿ ಅತ್ಯುತ್ತಮ ಕೀಟನಾಶಿಯೆನ್ನಿಸಿತು. ಆದರೆ ಇಂದು ಡಿ.ಡಿ.ಟಿ.ಗೆ ಪ್ರತಿರೋಧ ಬೆಳೆಸಿಕೊಂಡ 25 ಪ್ರಭೇದದ ಸೊಳ್ಳೆಗಳಿವೆ. ಡಿ.ಡಿ.ಟಿ. ದೇಹ ದಲ್ಲಿ ಕೊಬ್ಬು ಹೆಚ್ಚಿಗೆ ಇರುವ ಅಂಗಗಳಲ್ಲಿ ಸಂಚಯಿಸುತ್ತಾ ಹೋಗುತ್ತದೆ. ಇಂದು ಪಂಜಾಬಿನ ತಾಯಂದಿರ ಎದೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆ ನಿಗದಿ ಪಡಿ ಸಿದ ಪ್ರಮಾಣಕ್ಕಿಂತ 40 ಪಟ್ಟು ಹೆಚ್ಚು ಡಿ.ಡಿ.ಟಿ. ಇದೆ. 1973ರಲ್ಲಿ ಇದನ್ನು

ಅಮೇರಿಕಾದಲ್ಲಿ ನಿಷೇಧಿಸಲ್ಪಟ್ಟರೂ, ಭಾರತದಲ್ಲಿ ಇದರ ದುರ್ಬಳಕೆ ನಡದೇ ಇದೆ. ತೃತೀಯ ಜಗತ್ತಿನಿಂದ ಕಾಲ್ಕೀಗೆದಿದ್ದ ಮಲೇರಿಯಾ ಮತ್ತೆ ತನ್ನ ಸಾವಿನ ಕಬಂಧ ಬಾಹುಗಳನ್ನು ಬಿಗಿಯುತ್ತಿದೆ. ಕ್ಲೋರಿನ್‌ಗಿಂತ ನೂರುಪಟ್ಟು ಶಕ್ತಿ ಶಾಲಿಯಾದ ಬ್ರೋಮಿನ್‌ನ ಕೀಟನಾಶಕ ಮಿಥೈಲ್ ಬ್ರೋಮೈಡ್‌ನ ವಾರ್ಷಿಕ ಬಳಕೆ 60,000 ಟನ್‌ನಷ್ಟಿದೆ. 1975-88ರ ಅವಧಿಯಲ್ಲಿ ಅಮೇರಿಕಾದಲ್ಲಿ ಕೀಟನಾಶಗಳ ಬಳಕೆ ಶೇ. 19ರಷ್ಟು ಮತ್ತು ರಸಗೊಬ್ಬರದ ಬಳಕೆ ಶೇ. 10 ರಷ್ಟು ಕಮ್ಮಿಯಾಗಿದೆ. ಆದರೆ ಇಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳ ದುರ್ಬಲ ತಳಿಗಳನ್ನು ಬೆಳೆಯುವುದರಿಂದ ರಸಗೊಬ್ಬರ, ಕೀಟನಾಶಗಳ ಬಳಕೆ ಅವಿಚ್ಛಿನ್ನ ವಾಗಿ ಮುಂದುವರಿದೇ ಇದೆ.

ಪರಮಾಣು ಅಸ್ತ್ರಗಳ ಸ್ಫೋಟ ಮತ್ತು ಅಣುಶಕ್ತಿ ಉತ್ಪಾದನೆ ಪರಿಸರದ ಮೇಲೆ ಶಾಶ್ವತ ಹಾನಿ ಉಂಟುಮಾಡುವಂತದ್ದು. 1942ಕ್ಕೆ ಮೊದಲು ವಾತಾವರಣದಲ್ಲಿ ಪ್ಲುಟೋನಿಯಂ ಇರಲಿಲ್ಲ. ಒಂದು ಸಾಧಾರಣ ಅಣುಶಕ್ತಿ ಉತ್ಪಾದನಾ ಘಟಕ ತನ್ನ ಜೀವಿತಾವಧಿಯಲ್ಲಿ 200 ಕೆ.ಜಿ. ಪ್ಲುಟೋನಿಯಂ ಉತ್ಪಾದಿಸುತ್ತದೆ. ಪ್ರಪಂಚದ ಇಂದಿನ ಪ್ಲುಟೋನಿಯಂ ದಾಸ್ತಾನು 2 ದಶ ಲಕ್ಷ ಕೇಜಿ. 1 ಗ್ರಾಂ ಪ್ಲುಟೋನಿಯಂನಿಂದ 1 ದಶಲಕ್ಷ ಜನರನ್ನು ಕೊಲ್ಲ ಬಹುದು. ಇಡೀ ಪ್ರಪಂಚ ನಾಶಕ್ಕೆ ಬೇಕಾಗಿರುವುದು 4 ರಿಂದ 5 ಕೇಜಿ ಪ್ಲುಟೋನಿಯಂ. ಪ್ಲುಟೋನಿಯಂ 239ರ ಅರ್ಧಾಯುಸ್ಸು 24413 ವರ್ಷ, (ಇದು ತನ್ನ ಗಾತ್ರದಲ್ಲಿ ಅರ್ಧ ನಾಶವಾಗಲು ತೆಗೆದುಕೊಳ್ಳುವ ಸಮಯ) ಇದು ಮುಂದಿನ ಅನೇಕ ಪೀಳಿಗೆಯ ಪಾಲಿಗೆ ಘೋರ ದುರಂತ. ಭಾರತದಲ್ಲಿ ಅಣುಶಕ್ತಿ ಒಟ್ಟು ಶಕ್ತಿ ಉತ್ಪಾದನೆಯ ಪ್ರತಿಶತ 2 ಮಾತ್ರ. ನಮ್ಮ ಮುಂದೆ ನೂರಾರು ಪರ್ಯಾಯ ಶಕ್ತಿ ಆಕಾರಗಳಿವೆ. ಅವು ಪರಿಸರ ಸ್ನೇಹಿ, ಸರಳ, ಪ್ಲುಟೋನಿಯಂ ಉತ್ಪಾದಿಸದ ಆಕರಗಳು. ಆದರೆ ಅವ್ಯಾ ವುವೂ ಸರ್ಕಾರದ ಕಣ್ಣಿಗೆ ಬೀಳುವುದೇ ಇಲ್ಲ. ಪ್ರಪಂಚದ ಎಲ್ಲೆಡೆ ಅಣುಶಕ್ತಿ ಮುಚ್ಚಲ್ಪಡುತ್ತಿದ್ದರೆ ಇಲ್ಲಿ 20,000 ಕೋಟಿ ರೂ. ವೆಚ್ಚದ 10,000 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ 22 ಸ್ಥಾವರಗಳ ಯೋಜನೆ ರೂಪು ಗೊಳ್ಳುತ್ತದೆ. ಇವೆಲ್ಲ ಉತ್ಪಾದಿಸುವ ವಿದ್ಯುತ್ತು ರಾಷ್ಟ್ರೀಯ ಉತ್ಪಾದನೆಯ

ಶೇ. 2.5! ಅಣುಶಕ್ತಿ ಘಟಕಗಳಿಂದ ಬರುವ ವಿಕಿರಣ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸೂಕ್ತ ತಂತ್ರಜ್ಞಾನ ಇಲ್ಲಿಯವರೆಗೆ ಕಂಡುಹಿಡಿಯಲಾಗಿಲ್ಲ. ಬಹುಶಃ ಭವಿಷ್ಯದಲ್ಲಿಯೂ ಅದರ ಸಾಧ್ಯತೆ ಕಡಿಮೆ. ಅಮೇರಿಕದ ಟೆನ್ನೆಸ್ಸಿ, ಕೆಂಟುಕಿ ಮತ್ತು ಒಹೈಯೋ, ಸಂಸ್ಥಾನದ 3 ಸ್ಥಾವರಗಳು ತಮ್ಮ ಆಯುಸ್ಸು ಮುಗಿಸುತ್ತಿದ್ದಂತೆ ಸರ್ಕಾರ ಅವುಗಳನ್ನು ಕಳಚಿಹಾಕಲು ಬೇಕಾದ ಹಣವನ್ನು ಲೆಕ್ಕಹಾಕಲು ಸಮಿತಿಯೊಂದನ್ನು ನೇಮಿಸಿತು. ಆ ಸಮಿತಿಯ ವರದಿಯಲ್ಲಿ ಲೆಕ್ಕ ಹಾಕಿದ್ದ ವೆಚ್ಚ ರೂ. 40,000 ಕೋಟಿ! ಜಂಗಮಕ್ಕಳಿವುಂಟು, ಸ್ಥಾವರಕ್ಕಳಿವಿಲ್ಲ! ಇಷ್ಟೆಲ್ಲಾ ಆದರೂ ನಮ್ಮ ಅಣು ವಿಜ್ಞಾನಿಗಳು ಚೆರ್ನೋಬಿಲ್, ತ್ರೀಮೈಲ್ ಐಲೆಂಡ್ ಸ್ಥಾವರಗಳಲ್ಲಿನ ಅಪಘಾತಗಳ ನಂತರವೂ, 'ಅಣುಶಕ್ತಿ ಸುರಕ್ಷಿತ' ಎಂಬ ಗಿಣಿ ಪಾಠ ಹೇಳುತ್ತಾ ಜನರಿಗೆ ಮೋಸ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಅರೇಬೈಲಿನಲ್ಲಿ ಯುರೇನಿಯಂ ಉತ್ಖನನ, ರತ್ನಹಳ್ಳಿಯಲ್ಲಿ ಪರಿಷ್ಕರಣ, ಕೈಗಾದಲ್ಲಿ ವಿದ್ಯುತ್ಪಾದನೆ, ಕೋಲಾರದ ಗಣಿಗಳಲ್ಲಿ ಅಣುಭಸ್ಮದ ಹೂಳುವಿಕೆ-ಹೀಗೆ ಕರ್ನಾಟಕ ಅಣುಭಸ್ಮಾಸುರನ ವಿಷವೃತ್ತದಲ್ಲಿ ಸಿಲುಕಿದೆ. ಜೀವಂತ ಜ್ವಾಲಾಮುಖಿಯ ಮೇಲೆ ಜನ ಜೀವಿಸುತ್ತಿದ್ದಾರೆ.

ಬ್ರಿಟನ್ನಿನ ಸುಂಟರಗಾಳಿ, ಬಾಂಗ್ಲಾದ ಮಹಾಪೂರ, ಸಮುದ್ರ ಮಟ್ಟದ ಸತತ ಏರುವಿಕೆ, ಆಫ್ರಿಕಾದೇಶಗಳಲ್ಲಿನ ತೀವ್ರ ಕ್ಷಾಮ, ಇವೆಲ್ಲಕ್ಕೂ ಸಂಬಂಧವಿರುವ ಕಾರಣ ಹಸಿರುಮನೆ ಪರಿಣಾಮ. ಏಷಿಯಾದ ಬತ್ತದ ಗದ್ದೆಗಳಿಂದ, ಪ್ರಾಣಿಗಳ ಹೊಟ್ಟೆಯಿಂದ ಮತ್ತು ಕೊಳಚೆ ತೊಟ್ಟಿಯಿಂದ ಹೊರಡುವ ಮಿಥೇನ್ ಅನಿಲ, ಕಾಡಿನ ನಾಶ ಮತ್ತು ಇಂಧನ ದಹನದಿಂದ ಬರುವ ಇಂಗಾಲಾಮ್ಲ ಇವು ಹಸಿರುಮನೆ ಪರಿಣಾಮಕ್ಕೆ ಕಾರಣ.

ವಾತಾವರಣದ ಆರ್ದ್ರತೆ ಮತ್ತು ಶಾಖದ ಪರಸ್ಪರ ವಿನಿಮಯ-ಇವುಗಳ ಸಂಕೀರ್ಣ ಕ್ರಿಯೆ ಭೂಮಿಯ ವಾತಾವರಣವನ್ನು ಹಿತಕರವನ್ನಾಗಿ ಮಾಡುತ್ತದೆ. ಹಸಿರುಮನೆಯಲ್ಲಿರುವಂತೆ ಭೂಮಿ ಸೂರ್ಯನ ಕಿರಣಗಳನ್ನು

ಹೀರುತ್ತದೆ ಮತ್ತು ಹಿಂದಿರುಗಿಸುತ್ತದೆ. ಮಾನವನ ಹಸ್ತಕ್ಷೇಪದಿಂದ ಈ ಸೌಹಾರ್ದ ಸಂಬಂಧ ಕೆಟ್ಟಿದೆ. ಇದರಿಂದ ಭೂಮಿಯ ಉಷ್ಣತೆ ಪ್ರತಿವರ್ಷ 1.5-4.5°C ನಷ್ಟು ಹೆಚ್ಚುತ್ತಿದೆ. ಇದರ ನೇರ ಪರಿಣಾಮ ಆಹಾರ ಉತ್ಪತ್ತಿಯಮೇಲೆ. ಕ್ರಿ.ಶ. 2030ರ ಹೊತ್ತಿಗೆ ಆಹಾರ ಕಣಜವೆಂದು ಹೆಸರಾದ ಉತ್ತರ ಅಮೇರಿಕ ಒಣಭೂಮಿಯಾಗಿ ಪರಿವರ್ತಿತವಾಗುತ್ತದೆ. ಉತ್ತರಧ್ರುವದ ಹಿಮಕರಗಿ ಸಮುದ್ರ ನೀರಿನ ಮಟ್ಟ ಏರಿ ಅನೇಕ ರಾಷ್ಟ್ರಗಳು ನೀರಿಗೆ ಆಹುತಿಯಾಗುತ್ತವೆ. ಮಳೆ ಕಮ್ಮಿಯಾಗಿ-ಭೂಮಿ ಬರಡು. ಮರಳುಗಾಡಿನ ವಿಸ್ತಾರ ಹೆಚ್ಚಾಗಿ ಕ್ಷಾಮದ ಹಾವಳಿ, ವಸ್ತುಗಳ ಬೆಲೆ ಹೆಚ್ಚಳ ಮತ್ತು ಮಾನವನ ಬದುಕಿನ ಮೇಲೆ, ವಿಶ್ವ ಉದ್ಯಮದ ಮೇಲೆ ತೀವ್ರ ಪರಿಣಾಮ ಉಂಟಾಗುತ್ತದೆ.

ನಮ್ಮ ಸರ್ಕಾರಗಳ ಅಭಿವೃದ್ಧಿ ಯೋಜನೆಗಳು, ಅವುಗಳಲ್ಲಿ ಅಂತರ್ಗತವಾದ ದೋಷಗಳಿಂದ ಪ್ರಜಾಪೀಡಕ ಮತ್ತು ಪರಿಸರ ನಾಶಕಗಳು. ಅಭಿವೃದ್ಧಿ ಯೋಜನೆಗಳಿಂದ ನಿರಾಶ್ರಿತರಾದವರಲ್ಲಿ ಶೇ. 25ರಷ್ಟು ಜನರ ಪುನರ್ವಸತಿ ಸಾಧ್ಯವಾಗಿದೆ. ಭಾಕ್ರಾ ಜಲಾಶಯದಿಂದ ನಿರ್ವಸಿತರಾದವರಿಗೆ ಪುನರ್ವಸತಿ ಕಲ್ಪಿಸುವ ಕೆಲಸ 30 ವರ್ಷದಿಂದ ನಡೆಯುತ್ತಿದ್ದು ಇನ್ನೂ ಸರಿಯಾದ ಸೂತ್ರ ಸಾಧ್ಯವಾಗಿಲ್ಲ. ಆದರೂ ಸರ್ಕಾರ ನರ್ಮದಾ, ತೆಹರಿ, ಕೊಯಾಲ್‌ಕರೋ, ಇಂದ್ರಾವತಿ, ಜಮ್ಮುನಿಯಂತಹ ಪರಿಸರವಿರೋಧಿ. ಜನವಿರೋಧಿ ಯೋಜನೆಗಳನ್ನು ರೂಪಿಸಿ, ಅವನ್ನು ಕಾರ್ಯಗತ ಮಾಡುವುದೇ ತನ್ನ ಪ್ರಥಮ ಕರ್ತವ್ಯ ಎಂಬ ಮಾತನ್ನಾಡುತ್ತದೆ. 20.000 ಕೋಟಿ ರೂ. ವೆಚ್ಚದ ನರ್ಮದಾ ಸಾಗರ ಯೋಜನೆಯಿಂದ ನಿರಾಶ್ರಿತರಾಗಬಹುದಾದವರ ಸಂಖ್ಯೆ ಸುಮಾರು 8 ಲಕ್ಷ. ವಿಶ್ವಬ್ಯಾಂಕ್‌ನ ಹಿಂದಿನ ಅಧ್ಯಕ್ಷ ಕೊನೇಬಲ್‌ನಿಂದ ನೇಮಕಗೊಂಡಿದ್ದ ಮಾರ್ಸ್ ಸಮಿತಿ 'ಈ ಯೋಜನೆ ಪರಿಸರ ಮತ್ತು ಜನವಿರೋಧಿ, ಒಂದು ದೊಡ್ಡ ಆರ್ಥಿಕ ವಿಪರ್ಯಾಸ' ಎಂದಿದೆ. ವಿಶ್ವಬ್ಯಾಂಕ್ ಸಾಲದ ನಿಲುಗಡೆ ಮಾಡಿದೆ. ಯೋಜನೆಯ ಮುಂದುವರಿಕೆಗೆ ವರ್ಷಕ್ಕೆ 1000 ಕೋಟಿ ರೂ. ಖರ್ಚು ಮಾಡಬೇಕಾದಪರಿಸ್ಥಿತಿಯಿದ್ದರೂ, ನಮ್ಮ ಸರ್ಕಾರ ಇದನ್ನು ತನ್ನ ಘನತೆಯ ಪ್ರಶ್ನೆಯನ್ನಾಗಿಸಿಕೊಂಡು "ಯೋಜನೆಯ ನಿಲುಗಡೆ ಸಾಧ್ಯವಿಲ್ಲ" ಎನ್ನುತ್ತಿದೆ.

ಸರ್ಕಾರಿ ಅಂದಾಜಿನಂತೆ 4142 ಕೋಟಿ ರೂ, ವೆಚ್ಚದ ತೇಹರಿ ಯೋಜನೆ ಅತ್ಯಂತ ಅಪಾಯಕಾರಿ. 1986ರ ಎಸ್. ಕೆ. ರಾಯ್ ಸಮಿತಿ ಈ ಯೋಜನೆಯ ಸ್ಥಳದಲ್ಲಿನ ಭೂಕಂಪನಾಂಶ ರೀಚರ್ ಶ್ರೇಣಿಯಲ್ಲಿ (Rechter Scale) 8 ಇದ್ದು, ಭೂಕಂಪದಿಂದುಂಟಾಗುವ ಸ್ಫೋಟಕ ಶಕ್ತಿ 90,700 ಟನ್ ಟಿ. ಎನ್. ಟಿ.ಗೆ ಸಮನಾದ್ದು. ಅಣೆಕಟ್ಟು ಒಡೆದ 12 ಘಂಟೆಗಳಲ್ಲಿ ಋಷಿಕೇಶ, ಹರಿದ್ವಾರ, ಮೀರತ್, ಬುಲಂದ್‌ಶಹರ್ ಸಂಪೂರ್ಣ ನಾಶವಾಗುತ್ತದೆ, ಎಂದಿದೆ. ರಷ್ಯಾದ ವಿಸ್ಟೋಕೋಜ್ ಸಂಸ್ಥೆಗೆ (Ministry of water management and Ameliorisation) ಈ ಅಣೆಕಟ್ಟಿನ ನಿರ್ಮಾಣದ ಹೊಣೆ. ಈ ಸಂಸ್ಥೆ ಫ್ರಾನ್ಸ್‌ನ ವಿಸ್ತೀರ್ಣದಷ್ಟು ಜಮೀನಿನ ನಾಶಮಾಡಿ, ಜನರ ಜೀವಹರಣಮಾಡಿದ ಅಣೆಕಟ್ಟೊಂದನ್ನು ಕಟ್ಟಿದ್ದಕ್ಕಾಗಿ ವಿಸರ್ಜಿತವಾದ ಸಂಸ್ಥೆ. ಈ ರಕ್ತಪಿಪಾಸು ತಂತ್ರಜ್ಞಾನ ತೇಹರಿಗೆ ಆಮದಾಗಿದೆ !

ಹಾಗೆಯೇ ಕೋರಾಫುಟ್ ಜಿಲ್ಲೆಯ 5 ಲಕ್ಷ ಜಮೀನನ್ನು ನಾಶಮಾಡುವ ಇಂದ್ರಾವತಿ ಯೋಜನೆಯ ಅರ್ಧ ಕೆಲಸ ಮುಗಿದಿದ್ದರೂ ಇಂದಿಗೂ ಪರಿಸರ ಅಧ್ಯಯನ ನಡೆದಿಲ್ಲ, ಪುನರ್ವಸತಿಯ ಕಾರ್ಯಕ್ರಮ ರೂಪಿಸಲಾಗಿಲ್ಲ.

ಉತ್ತರ ಪ್ರದೇಶದ ಜಮ್ರಾನಿ ಯೋಜನೆಯಿಂದ 290000 ವಿಶಿಷ್ಟ ಸಾಲ್ ತೇಗದ ಮರ ನಾಶವಾಗುತ್ತಿದ್ದು, ಈ ಯೋಜನೆಯಿಂದ ನೈನಿತಾಲ್ ಪ್ರದೇಶದಲ್ಲಿ ಭೂಕಂಪದ ಸಾಧ್ಯತೆ ಹೆಚ್ಚಾಗುತ್ತದೆ ಎಂಬುದನ್ನು ಸರ್ಕಾರಿ ಅಧಿಕಾರಿಗಳೇ ಒಪ್ಪಿಕೊಂಡಿದ್ದಾರೆ.

ನಾಗಾರ್ಜುನ ಸಾಗರ ಜಲಾಶಯ ನಿರ್ಮಾಣದ ನಂತರ ಜಮೀನಿನಲ್ಲಿ ಅಂತರ್ಜಲದ ಮಟ್ಟ ಏರಿ, ಫ್ಲೋರೈಡ್, ಕ್ಯಾಲ್ಸಿಯಂ, ಸತು, ಮಾಲಿಬ್ಡಿನಂ ಮತ್ತು ಮೆಗ್ನೀಷಿಯಂ ಲೋಹಗಳ ಪ್ರಮಾಣದಲ್ಲಿ ಬದಲಾವಣೆ ಕಂಡುಬಂತು. ಆ ನೆಲದಲ್ಲಿ ಬೆಳೆದ ಜೋಳದಲ್ಲಿ ಮಾಲಿಬ್ಡಿನಂ ಅಂಶ ಹೆಚ್ಚಾಗಿ, ತಾಮ್ರದ ಅಂಶ ಕಡಿಮೆಯಾಗಿ, ಹೊಸ ರೋಗ ಜೆನು ವಾಲ್ಗಮ್ (Jenu Valgam)

E 120
03223
COMMUNITY HEALTH CELL
LIBRARY AND DOCUMENTATION UNIT

ಕಾಣಿಸಿಕೊಂಡಿತು. 10 ರಿಂದ 20 ವರ್ಷದವರಲ್ಲಿ ಕಾಣಿಸಿಕೊಂಡ ಈ ರೋಗದಿಂದ ಮಂಡಿಗಳು ಒಂದಕ್ಕೊಂದು ಅಪ್ಪಬಂದು ಚಲನೆಯೇ ಅಶಕ್ಯವಾಗಿ ಬದುಕು ಘೋರವಾಗುತ್ತದೆ. ಇಂದು ಲಕ್ಷಾಂತರ ಮಂದಿ ಈ ರೋಗದಿಂದ ನರಳುತ್ತಿದ್ದಾರೆ.

ಭತ್ತ ಮತ್ತು ಕಬ್ಬಿನ ಗದ್ದೆಗಳಲ್ಲಿ ನಿಂತ ನೀರಿನಿಂದ ಹೆಚ್ಚಾದ ಸೊಳ್ಳೆಗಳಿಂದ (ಪ್ರಭೇದ-ಕ್ಯೂಲೆಕ್ಸ್ ಟ್ರೈಟೇನಿಯೋರೈಂಕಸ್) ಪ್ರಾರಂಭವಾದ ರೋಗ ಮಿದುಳುಜ್ವರ.

ಸಹ್ಯಾದ್ರಿಯ ಕಾಡು ನಾಶವಾಗಿದ್ದರಿಂದ ಹೆಚ್ಚಾದ ಹೆಮಾಫೈಸಾಲಿಸ್ ಸ್ಪಿನಿಜೆರಾ ಉಣ್ಣೆಯಿಂದ 'ಕ್ಯಾಸನೂರು ಅರಣ್ಯ ಕಾಯಿಲೆ'ಗ ಕಾರಣವಾದ ವೈರಸ್ಸುಗಳ ಪ್ರಸರಣ.

ಅಭಿವೃದ್ಧಿಯೇ ವಿನಾಶ ತಂದ ದುರಂತದ ಸಾಕ್ಷಿಗಳಿವು. 60 ದಶಲಕ್ಷ ಆದಿವಾಸಿಗಳು ಈ ಯೋಜನೆಗಳಿಂದ ನಿರಾಶ್ರಿತರಾಗಿದ್ದು, ಇದರಲ್ಲಿ ಬಹಳಷ್ಟು ಜನ ನಗರಗಳಿಗೆ ಮುಕುರುತ್ತಿದ್ದಾರೆ. 1951ರ ಜನಸಂಖ್ಯೆಯನ್ನು ನೆಲೆಯಾಗಿಟ್ಟುಕೊಂಡರೆ. (1951ರಲ್ಲಿ 100) ಇಂದು ವಿಶಾಖಪಟ್ಟಣದಲ್ಲಿ 974, ಲೂಧಿಯಾನಾದಲ್ಲಿ 658, ಬೆಂಗಳೂರಿನಲ್ಲಿ 520 ಜನ ವಾಸಿಸುತ್ತಿದ್ದಾರೆ. ಅಸಮರ್ಪಕ ಭೂಮಿ ಹಂಚಿಕೆಯಿಂದ ಹಳ್ಳಿಯ ಜಮೀನು ಶ್ರೀಮಂತರ ಕೈಯಲ್ಲಿ ಕೇಂದ್ರೀಕೃತವಾಗಿ ಸಾಮಾಜಿಕ ಅಸಮತೋಲನ ಹೆಚ್ಚಿದೆ. ಜನಸಂಖ್ಯೆ, ನಿರುದ್ಯೋಗ ಹೆಚ್ಚಿ, ಸಾಮೂಹಿಕ ಜಮೀನು ಕಾಡಿನ ಮೇಲೆ ಒತ್ತಡ ಹೆಚ್ಚಿ ಅವು ನಿಧಾನವಾಗಿ ಸಾಯುತ್ತಿವೆ. ಸಾಮೂಹಿಕ ಜಮೀನನ್ನು ತಮ್ಮ ಜೀವನಾಧಾರವಾದ ಜಾನುವಾರುಗಳ ಮೇವಿಗೆ ಅವಲಂಬಿಸಿದ್ದ ಜನರು ಅತಂತ್ರರಾಗಿ ಪಟ್ಟಣಗಳಿಗೆ ಗುಳೆ ಹೊರಟರು. ನಗರಗಳು 'ನಾಗರೀಕ ಕೊಳಚೆ ಪ್ರದೇಶ'ಗಳಾದವು. ಎಲ್ಲಾ ಯೋಜನೆಗಳೂ ನಗರಗಳ ಅವಶ್ಯಕತೆಯನ್ನು ತೀರಿಸುವ ಸಲುವಾಗಿ ರೂಪುಗೊಂಡು. ಯೋಜನೆಯ ಫಲ ತಲುಪಬೇಕಾದವರನ್ನು ತಲುಪದೆ, ಪರಿಸ್ಥಿತಿಯು ಕ್ರೂರ ವ್ಯಂಗ್ಯವಾದವು.

ಪ್ರಾಕೃತಿಕ ಸಂಪತ್ತಿನ ದುರ್ಬಳಕೆ ಮತ್ತು ಮಾನವನ ಹಸ್ತಕ್ಷೇಪದಿಂದ ಉಂಟಾದ ಪರಿಸರ ಮಾಲಿನ್ಯದಿಂದ ಭೂಮಿ ನಾಶವಾಗದಂತೆ ತಡೆದಿರುವುದು-ನಾಲ್ಕು :

* ಸಸ್ಯ ಮತ್ತು ಪ್ರಾಣಿಗಳು ಭೂಮಿ ಬಿಸಿಯಾಗದಂತೆ ತಡೆದಿವೆ.

* ಸಾಗರದಲ್ಲಿನ ಸೂಕ್ಷ್ಮ ಜೀವಿಗಳು ಭೂಮಿಯ ಹವಾಗುಣವನ್ನು ನಿಯಂತ್ರಿಸುತ್ತಿವೆ.

* ಕೊಲ್ಲಿಗಳಲ್ಲಿನ ಉಷ್ಣ ಪ್ರವಾಹಗಳು

* ವಾಯು ಮಂಡಲದಲ್ಲಿನ ಸೂಕ್ಷ್ಮ ಹೊಂದಾಣಿಕೆ.

* ನಮ್ಮಗಳ ಅತೀ ಬುದ್ಧಿವಂತಿಕೆಯಿಂದ ಆದ ಈ ಅತ್ಯಾಚಾರವನ್ನು ನಾವೆಲ್ಲಾ ಒಟ್ಟಾಗಿ ಸೇರಿ ಪ್ರತಿಭಟಿಸಲೇ ಬೇಕಾಗಿದೆ.

* ನಮ್ಮ ಭೂಮಿಯ ರಕ್ಷಣೆಗಾಗಿ ನಾವು ಮಾಡಬೇಕಾಗಿರುವುದು.

* ಜನ ಸಂಖ್ಯಾ ನಿಯಂತ್ರಣ.

* ಕೃಷಿ ಉತ್ಪಾದನಾ ಕ್ಷೇತ್ರಗಳನ್ನು ಸಂರಕ್ಷಿಸುವುದು.

* ಹಳ್ಳಿಗರಿಗೆ ಬೇಕಾದ ಆಹಾರ, ದನಗಳಿಗೆ ಬೇಕಾದ ಮೇವು, ಉರುವಲು, ಗೊಬ್ಬರ ಮತ್ತು ನಾರುಗಳನ್ನು ಕೊಡುವ ಮರಗಳನ್ನು ಬೆಳಸುವುದು/ಗೃಹೋಪಯೋಗಿ ಮರಗಳನ್ನು-ಉದ್ದಿಮೆಗೆ ಬೇಕಾದ ಮರಗಳನ್ನು ಬೆಳೆಯುವುದು.

* ತ್ಯಾಜ್ಯ ವಸ್ತುಗಳ ಸಂಖ್ಯೆಯ/ಸಂಚಯದ ನಿಯಂತ್ರಣ, ಜೈವಿಕ

ವಸ್ತುಗಳ ಮತ್ತು ಮತ್ತೆ ಮತ್ತೆ ಬಳಸಬಹುದಾದ ವಸ್ತುಗಳ ಬಳಕೆಗೆ ಪ್ರೋತ್ಸಾಹ.

* ಇಂಧನವನ್ನು ಪೋಲಾಗದಂತೆ ಬಳಸುವುದು/ಶಕ್ತಿ ಮೂಲಗಳನ್ನು ಜತನದಿಂದ ಕಾಯ್ದಿಟ್ಟುಕೊಳ್ಳುವುದು/ಬದಲೀ ಶಕ್ತಿ ಮೂಲಗಳನ್ನು ಶೋಧಿಸಿ, ಅಭಿವೃದ್ಧಿ ಪಡಿಸುವುದು.

* ಮಳೆ ನೀರಿನ ಶೇಖರಣೆ ಮತ್ತು ಬಳಕೆ. ಕೆರೆಕಟ್ಟೆಗಳ ದುರಸ್ತಿ, ದಂಡೆಯಲ್ಲಿ ಮರಗಿಡಗಳನ್ನು ಬೆಳೆಸಿ ನೀರು ಆವಿಯಾಗದಂತೆ, ಹೂಳು ಹೆಚ್ಚದಂತೆ ಕಾಯ್ದಿಟ್ಟುಕೊಳ್ಳುವುದು.

* ನಗರಗಳಲ್ಲಿ ಚರಂಡಿ ನೀರಿನ ಸಂಸ್ಕರಣೆ ಮತ್ತು ಪುನರ್ಬಳಕೆ.

* ನೀರನ್ನು ಕಡಿಮೆ ಬಳಸುವ/ಬಳಸದೇ ಇರುವ ಹೊಸ ತಂತ್ರಜ್ಞಾನದ ಕೈಗಾರಿಕೆಗಳ ಸ್ಥಾಪನೆ, ಕೈಗಾರಿಕೆಗಳಲ್ಲಿ ನೀರಿನ ಸತತ ಪುನರ್ಬಳಕೆ.

* ವ್ಯವಸಾಯ ಭೂಮಿಯನ್ನು ಆದಷ್ಟು ಸಮ ಮಟ್ಟ ಮಾಡಿ, ಬದುಗಳ ಅಗಲ ಹೆಚ್ಚಿಸಿ, ಹೆಚ್ಚು ನೀರು ಭೂಮಿಯಲ್ಲಿ ಇಂಗುವಂತೆ ಮಾಡುವುದು.

* ಇಂದು ಅನುಸರಿಸುತ್ತಿರುವ ನೀರಿನ ನಿರ್ವಹಣಾ ವಿಧಾನಗಳನ್ನು ಪೂರ್ಣ ಬದಲಾಯಿಸಿ, ಅದರಲ್ಲಿನ ಲೋಪ ದೋಷಗಳನ್ನು ತಿದ್ದಿ, ಸರ್ವವ್ಯಾಪಕ ನಿರ್ವಹಣಾ ಪದ್ಧತಿಯನ್ನು ಜಾರಿಗೊಳಿಸುವುದು, ಹೆಚ್ಚು ನೀರು ಬೇಡದ ಅಗತ್ಯ ಬೆಳೆ ಬೆಳೆಯುವುದು.

* ಕಾರ್ಖಾನೆಗಳಲ್ಲಿ ದೂಳು, ಕಲ್ಮಲ, ವಿಷವಾಯು ನಿಯಂತ್ರಣ. ಕಾರ್ಖಾನೆಗಳ ಚಿಮಣಿಗಳ ಎತ್ತರ ಹೆಚ್ಚಿಸಿ, ಅವಕ್ಕೆ ವಿದ್ಯುತ್ ಚಾಲಿತ ಧೂಳು ಹೀರಕಗಳನ್ನು ಅಳವಡಿಸುವುದು.

* ರಸ್ತೆಗಳ ಉತ್ತಮ ನಿರ್ವಹಣೆ/ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಸುಧಾರಣೆ/ಸೈಕಲ್ ಬಳಕೆಗೆ ಪ್ರೋತ್ಸಾಹಿಸುವುದು. ವಾಹನ ಗಳಿಂದ ಬರುವ ಹಾನಿಕಾರಕ ಅನಿಲಗಳನ್ನು ಉತ್ತಮ ತಂತ್ರ ಜ್ಞಾನದ ಮೂಲಕ ಕಡಿಮೆ ಮಾಡುವುದು.

*

"ಭೂಮಿ ದಿನಾಚರಣೆ"ಯ ಕಲ್ಪನೆ ಬಂದದ್ದು ಅಮೇರಿಕದ ಸೆನೇಟರ್ ಗೆರಾಲ್ಡ್ ನೆಲ್ಸನ್‌ಗೆ. 22ರ ಏಪ್ರಿಲ್ 1970 ರಂದು ಭೂಮಿಗೆ 5 ಕೋಟಿ ವರ್ಷವೆಂದು ಮೊದಲ ಹುಟ್ಟುಹಬ್ಬ ಆಚರಿಸಲಾಯಿತು. ಆ ದಿನ 2 ಕೋಟಿ ಜನ ಅವನೊಟ್ಟಿಗೆ ಕೈ ಜೋಡಿಸಿ ಭೂಮಿಯನ್ನು ಅಭಿನಂದಿಸಿ ಭೂಮಿ ದಿನಾಚರಣೆಗೆ ಪ್ರಾರಂಭ ಹಾಡಿದರು. 'ಭೂಮಿ ದಿನಾಚರಣೆ'ಯ ಸಮಿತಿ ಭೂಮಿಯಷ್ಟೇ ದೊಡ್ಡದಿದೆ. ಜಾಗತಿಕ ಸಂಘಟನೆಗಳಲ್ಲದೆ ಸಬ್ಬಾತ್ ಅಲಂ, ಗ್ರೀನ್ ಪೀಸ್, ಭೂಮಿ ಮೊದಲು, ಭೂಮಿಯ ಗೆಳೆಯರು. ಮುಂತಾದ ಖಾಸಗೀ ಸಂಘಟನೆಗಳು ಅದರ ಹಿಂದಿವೆ. ಅಲ್ಲಿಂದ ಪ್ರಾರಂಭವಾದ ಭೂಮಿಯ ಕರೆ ಕಂಡುಕೊಂಡ ಮುಂದಿನ ಹಂತ ಅಮೇರಿಕಾದ ಉಪಾಧ್ಯಕ್ಷ ಸ್ಥಾನಕ್ಕೆ ನಿಂತಿದ್ದ ಅಭ್ಯರ್ಥಿ ಅಲ್ಬರ್ಟ್ ಗೋರ್ ಪರಿಸರ ಸಮಸ್ಯೆಯನ್ನು ಮುಖ್ಯವಾಗಿ ಇರಿಸಿಕೊಳ್ಳುವಲ್ಲಿಗೆ. ನಂತರ 'ಟೈಮ್ಸ್' ಪತ್ರಿಕೆ ಮೊದಲ ಬಾರಿಗೆ ವರ್ಷದ ವ್ಯಕ್ತಿಯಾಗಿ ಭೂಮಿಯನ್ನು ಆರಿಸಿತು. ಪರಿಸರ ಕಾಳಜಿ ಜನರ ದಿಢೀರ್ ಗಮನ ಸೆಳೆಯಿತು.

ಅಮೇರಿಕದ ನೋಬೆಲ್ ಪ್ರಶಸ್ತಿ ವಿಜೇತ ಭೌತ ವಿಜ್ಞಾನಿ ಡಾ॥ ಹೆನ್ರಿ ಕೆಂಡಾಲ್ ನೇತೃತ್ವದ 69 ದೇಶಗಳ 1575 ವಿಜ್ಞಾನಿಗಳು ಭೂಮಿ ರಕ್ಷಣೆಗೆ ದೇಶಗಳ ಮುಖ್ಯಸ್ಥರಿಗೆ ತತ್‌ಕ್ಷಣ ಭೂಮಿನಾಶದ ತಡೆಗೆ ಅಗತ್ಯ ಕ್ರಮಕ್ಕಾಗಿ ಒತ್ತಾಯಿಸಿದರು. ಓಜೋನ್ ಪದರನಾಶ. ವಾಯುಮಾಲಿನ್ಯ, ನೀರಿನ ದುರ್ಭಿಕ್ಷ್ಯ, ಸಮುದ್ರಕ್ಕೆ ವಿಷ, ಅರಣ್ಯನಾಶ, ಪ್ರಾಣಿಸಸ್ಯಗಳ ನಿರ್ವಂಶ ಮತ್ತು ಕೃಷಿಭೂಮಿಯ ನಾಶದ ತಡೆಗೆ :

* ಪರಿಸರ ನಾಶಕ್ಕೆ ಕಾರಣವಾದ ಎಲ್ಲಾ ಚಟುವಟಿಕೆಗಳ ನಿಯಂತ್ರಣ

* ಶಕ್ತಿ, ನೀರು, ಅಗತ್ಯ ವಸ್ತುಗಳ ಸಮರ್ಪಕ ಬಳಕೆ,

* ಜನ ಸಂಖ್ಯಾ ಹೆಚ್ಚಳದ ನಿಯಂತ್ರಣ

* ಬಡತನ ನಿರ್ಮೂಲನ

* ಸ್ತ್ರೀ ಸಮಾನತೆ ಮತ್ತು ಜನನ ನಿಯಂತ್ರಣದ ಬಗ್ಗೆ ಅವರಿಗೆ ಪೂರ್ಣ ಹಕ್ಕು.

ಈ ಕ್ಷೇತ್ರಗಳಲ್ಲಿ ಕೆಲಸ ತೀವ್ರ ವೇಗವಾಗಿ ಆಗಬೇಕೆಂದು ಸಮಿತಿ ಮನವಿ ಮಾಡಿತು.

ಭಾರತ ಸಂವಿಧಾನದ ಪರಿಚ್ಛೇದ 51(ಎ) ಪ್ರತೀ ಪ್ರಜೆಯ ಮೂಲ ಭೂತ ಕರ್ತವ್ಯದಲ್ಲಿ - ನದಿ, ಕಾಡು, ಜೀವರಾಶಿಗಳ ರಕ್ಷಣೆ ಮತ್ತು ಅವುಗಳ ಸ್ಥಿತಿಯನ್ನು ಉತ್ತಮಗೊಳಿಸುವುದು ಸಹಜೀವಿಗಳ ಮೇಲೆ ದಯೆ ತೋರುವುದು ಸೇರ್ಪಡೆಯಾಗಿದೆ. ಇದಕ್ಕೂ ಪರಿಚ್ಛೇದ 21(ಎ) ಹೇಳುವ ಬದುಕುವ ಹಕ್ಕಿಗೂ ನೇರ ಸಂಬಂಧವಿದೆ. ಪರಿಸರ ನಾಶ ಹೆಚ್ಚಾದಂತೆ ಅರಣ್ಯವನ್ನೇ ಅವಲಂಬಿಸಿದ ಜನ ತಮ್ಮ ಜೀವನಾಧಾರಗಳನ್ನು ಕಳೆದುಕೊಂಡು ನಿರ್ಗತಿಕರಾಗುತ್ತಾರೆ. ಶಸ್ತ್ರಾಸ್ತ್ರ ಸಂಗ್ರಹಣೆ, ಜನಾಂಗೀಯ-ಧಾರ್ಮಿಕ ಅಸಹಿಷ್ಣುತೆ, ರಾಜಕೀಯ ಸಾಮಾಜಿಕ ಅಂತರ ಹೆಚ್ಚಳ, ಮಾನವ ಹಕ್ಕುಗಳ ಉಲ್ಲಂಘನೆ. ಸಹಜೀವಿಗಳ ನೋವಿನ ಬಗ್ಗೆ ಅತೀತತೆ, ಆರ್ಥಿಕ ಅಸಮಾನತೆ ಮತ್ತು ಪರಿಸರ ನಾಶಗಳ ನಡುವೆ ಅವಿನಾಭಾವ ಸಂಬಂಧವಿದೆ. ದುರ್ಬಲರ ಮೇಲಿನ ತನ್ನ ಹಿಡಿತ ಬಲಗೊಳಿಸಲು ಮನುಷ್ಯ ಹಿಂಸೆಗಿಳಿಯುತ್ತಾನೆ. 2ನೇ ಮಹಾಯುದ್ಧದ ನಂತರ ಶರಣಾಗಿದ್ದ ಪೀತವರ್ಣದ ಜಪಾನಿಯರ ಮೇಲೆ ಹಿರೋಷಿಮಾ/ ನಾಗಸಾಕಿಗಳ ಮೇಲೆ ಲಿಟ್ಲ್‌ಬಾಯ್/ಫ್ಯಾಟ್‌ಮ್ಯಾನ್ ಹೆಸರಿನ ಬಾಂಬ್ ಹಾಕಿದ ಬಿಳಿಯರು, ಅಮೇರಿಕ-ದಕ್ಷಿಣ ಆಫ್ರಿಕಾದಲ್ಲಿನ ಅಮಾನವೀಯ ಜನಾಂಗಿಯ ದ್ವೇಷ, ವಿಯಟ್ನಾಂನ ಮೇಲೆ ರಸಾಯನಿಕ-ಜೈವಿಕ ಅಸ್ತ್ರಗಳನ್ನು ಸುರಿದ ಅಮೇರಿಕನ್ನರು, ತೃತೀಯ ಜಗತ್ತನ್ನು ಶೋಷಿಸಲೆಂದೇ ಶಕ್ತ ರಾಷ್ಟ್ರ

ಗಳು ಹುಟ್ಟುಹಾಕುವ ವಿಶ್ವಬ್ಯಾಂಕ್-ಗ್ಯಾಟ್-ಜಾಗತಿಕ ಹಣಕಾಸು ಸಂಸ್ಥೆ-ಪ್ಯಾರಿಸ್ ಸಮ್ಮೇಳನದಂತಹ ದುಷ್ಟಕೂಟಗಳು, ಜನಪರ ನರ್ಮದಾ ಬಚಾವೋ ಆಂದೋಳನವನ್ನು ಮುರಿಯಲು ಯತ್ನಿಸಿದ ಸರ್ಕಾರ, ಶೋಷಿತರ ಪರವಾಗಿ ತನ್ನ ಧ್ವನಿ ಎತ್ತಿದ್ದಕ್ಕಾಗಿ ಕೊಲೆಯಾದ ಶಂಕರ್ ಗುಹಾನಿಯೋಗಿ. ಕಂಚನಹಳ್ಳಿ ಗಂಗಾಧರಮೂರ್ತಿ, ಗಿರಿಜನರ ಪ್ರತಿಭಟನೆಗೆ ದನಿಯಾಗಿದ್ದಕ್ಕಾಗಿ ವಿವಸ್ತ್ರಗೊಂಡ ಬಿಡಿಶರ್ಮಾ-ಇವೆಲ್ಲ ತೋರಿಸುವುದು ಕೆಟ್ಟ ಮಾನವ ಪರಿಸರವನ್ನೇ. ದೇಶಕ್ಕೆ ದೇಶವೇ ಹೊತ್ತಿ ಉರಿದ ಮಂಡಿರ ಮಸೀದಿಯ ಗಲಭೆ ಮತ್ತು ನಂತರ ನಡೆದ ಬಾಂಬ್ ಸ್ಫೋಟದಿಂದ ಸತ್ತವರಲ್ಲಿ ಬಹುಪಾಲು ಜನ ಪರಿಸರ ನಿರಾಶ್ರಿತರೇ. ಹಣದುಬ್ಬರ, ಪ್ರಾಕೃತಿಕ ದುರಂತ, ಮಾನವೀಕೃತ ದುರಂತಗಳಲ್ಲೆಲ್ಲಾ ಹೆಚ್ಚು ತೊಂದರೆ ಆಗುವುದು ಬಡವರಿಗೇ. ಬಾಂಬೆಯ ಬಾಂಬ್ ಸ್ಫೋಟಕ್ಕೆ ವಿದೇಶೀ ಕೈವಾಡದ ಕಾರಣ ಎಂದು ಕೈ ತೋರಿಸುವ ನಮ್ಮ ರಾಜಕಾರಣಿಗಳಿಗೆ, ಜನರ ಸಾವು ನೋವಿಗೆ ತಾವು ಯೋಚಿಸಿದ ತಪ್ಪು ಆರ್ಥಿಕ ಯೋಜನೆಗಳೇ ಕಾರಣ ಎಂಬ ಪ್ರಜ್ಞೆಯೇಕೆ ಉದಯಿಸುವುದಿಲ್ಲ ?

ಮನುಷ್ಯನ ಸ್ವಾರ್ಥ ಮತ್ತು ಸುಖಾಪೇಕ್ಷೆಯಿಂದ ಪರಿಸರ ಹಾಳಾಗುತ್ತಿರುವುದರಿಂದ, ಮನುಷ್ಯನ ಮನಸ್ಸಿನಲ್ಲಿ ಮೂಲಭೂತ ಬದಲಾವಣೆ ಆಗಬೇಕು. ಎಲ್ಲರಿಗೂ ಸಿಗದ ಸುಖ ಸುಖವೇ ಅಲ್ಲ ಎಂಬ ಭಾವನೆ, ಮನುಷ್ಯ ಮನುಷ್ಯರ ನಡುವೆ, ಮನುಷ್ಯ-ನಿಸರ್ಗದ ನಡುವೆ ಸಮತೋಲನ ಸಾಧನೆ, ಎಲ್ಲರ ಒಳಿತಿಗೆ, ಪ್ರಗತಿಗೆ ದುಡಿಯುವ ಸ್ವಸ್ಥ ಆರೋಗ್ಯಕರ ಮನಸ್ಸು ನಮ್ಮದಾಗಬೇಕು. ಪರಿಸರ ರಕ್ಷಣೆಯ ಇನ್ನೊಂದು ಮುಖವಾದ ನಿರುದ್ಯೋಗ ಉರವಲು ಸಮಸ್ಯೆ, ಮೇವಿನ ಕೊರತೆ, ಸರ್ಕಾರಿ ಆದಾಯ, ನಿರುದ್ಯೋಗ ಸಮಸ್ಯೆ ಇವೆಲ್ಲಕ್ಕೂ ಒಂದು ಸ್ವಸ್ಥ, ಆರೋಗ್ಯಪೂರ್ಣ, ಅಹಿಂಸಾತ್ಮಕ ಮತ್ತು ನಮ್ಮ ಜನರ ಬದುಕಿಗೆ, ಈ ನೆಲಕ್ಕೆ ಹತ್ತಿರವಾದ ಪರ್ಯಾಯದ ಶೋಧದ ಅಗತ್ಯ ಇಂದು ಹೆಚ್ಚಿದೆ.

ಪರಿಸರ ರಕ್ಷಣೆಗಾಗಿ ಜಾಗತಿಕ ಪ್ರಯತ್ನಗಳು ನಡೆಯುತ್ತಿವೆ. ಆದರೆ ಪರಿಸರ ರಕ್ಷಣೆಗೆ ನಮ್ಮ ವೈಯಕ್ತಿಕ ಕಾಣಿಕೆಯ ಪ್ರಶ್ನೆ ಬರುತ್ತದೆ. ನಮ್ಮ

ಬದುಕನ್ನು, ಬದುಕಿನ ರೀತಿಯನ್ನು ಸರಳಗೊಳಿಸಬೇಕಾದ ಅಗತ್ಯ ಎಂದಿಗಿಂತ
ಇಂದು ಹೆಚ್ಚಿದೆ. ಎಲ್ಲವನ್ನೂ ಸರ್ಕಾರವೇ ಮಾಡಬೇಕಾಗಿಲ್ಲ. ವ್ಯಯಕ್ತಿಕ
ವಾಗಿ ನಮ್ಮ ಸುತ್ತಲಿನ ಪರಿಸರ ರಕ್ಷಣೆಗೆ ನಾವು ಮಾಡಬಹುದಾದದ್ದೇನು
ಎಂಬುದರ ಅರಿವು ನಮಗೆ ಮೂಡಬೇಕು. ನಮ್ಮ ಹಕ್ಕಿನ ಬಗ್ಗೆ ಮಾತನ್ನಾ
ಡುತ್ತಲೇ ನಮ್ಮ ಕರ್ತವ್ಯದ ಬಗ್ಗೆ ಕೆಲಸ/ಚಿಂತನೆ ನಡೆಸಬೇಕು. ಗಾಂಧೀ
ಹೇಳುತ್ತಾರೆ- "ಕರ್ತವ್ಯದ ಸರಿಯಾದ ಪಾಲನೆಯಿಂದ ಹಕ್ಕು ತಾನಾಗಿಯೇ
ಬರುತ್ತದೆ ಎಂಬುದನ್ನು ನಾನು ನನ್ನ ತಾಯಿಯಿಂದ ಕಲಿತೆ." ಭೂಮಿಯ
ದುರಂತವೆಂದರೆ ಎಲ್ಲಾ ತಾಯಿಯರೂ ಗಾಂಧೀಜಿಯ ತಾಯಿಯಂತೆ ತಮ್ಮ
ಮಕ್ಕಳಿಗೆ ತಮ್ಮ ಕರ್ತವ್ಯ ಮತ್ತು ಸಾಮಾಜಿಕ ಬದ್ಧತೆಯ ಬಗ್ಗೆ ಹೇಳ
ದಿರುವುದು.

ಭೂಮಿಯ ಮೇಲಿನ ಎಲ್ಲಾ ಸಹಜೀವಿಗಳ ಬದುಕು ಸಹ್ಯ, ಸುಂದರ
ವಾಗಬೇಕಾದರೆ ನಾವು ಅದನ್ನು ಪ್ರೀತಿಸಬೇಕು, ಆ ಪ್ರೀತಿಯ ಉಳಿಯುವಿಕೆಗೆ
ಕೆಲಸ ಮಾಡಬೇಕು. ಅಮೇರಿಕದ ಗ್ರಾಹಕ ಚಳುವಳಿಯ ನೇತಾರ ರಾಲ್ಫ್
ನ್ಯಾಡರ್ ಹೇಳುತ್ತಾರೆ.—"ಅತ್ಯುಗ್ರ ದೇಶಪ್ರೇಮಿ ಬಾವುಟವನ್ನು ಬೀಸುತ್ತಾ
ಕೂರಲು ಸಮಯವಿಲ್ಲದಿರುವವನು. ಅವನ ಪ್ರಕಾರ ದೇಶವನ್ನು ಪ್ರೀತಿಸುವು
ದೆಂದರೆ ಬಾಳಿಕೊಂಡಿರಲು ಹೆಚ್ಚು ಹೆಚ್ಚು ಯೋಗ್ಯವನ್ನಾಗಿ ದೇಶವನ್ನು
ರೂಪಿಸುವುದು." ಅಂತಹ ದೇಶದ ಸೃಷ್ಟಿ ನಮ್ಮೆಲ್ಲರ ಗುರಿಯಾಗಬೇಕು.

* * *

ಅರಣ್ಯವೆಂದರೆ

ವಿಶಿಷ್ಟ ಜೀವಕೋಶ, ಅದು ತನಗಾಗಿ

ಏನನ್ನೂ ಬೇಡದೆ, ಬೇಡಿ ಬಂದ ಎಲ್ಲರಿಗೂ

ತನ್ನ ಅಸ್ತಿತ್ವವನ್ನೇ ಧಾರೆ ಎರೆಯುತ್ತದೆ. ಎಲ್ಲಾ

ಜೀವಿ

ಗಳಿಗೂ

ಆಶ್ರಯ

ನೀಡು

ತ್ತದೆ

ತನ್ನನ್ನು

ಕಡಿಯಲು

ಕೊಡಲಿ ತಂದವನಿಗೂ

ನೆರಳು ನೀಡುತ್ತದೆ.

—ಗೌತಮ ಬುದ್ಧ